and in the meanwhile, there are two Bills which have been introduced yesterday. They are very formal bills, innocent Bills, but important from the point of view of convenience and from the point of view of preventing loss of revenue to Government.

The Electricity Board is constituted and the Bill is to enable the Board to levy and collect tax and credit it to Government. The other Bill, namely, the Sales Tax Bill, is also to prevent loss of revenue to Government. I think Hon'ble Members have gone through it and will agree that it is a very small Bill. We do not want Government to lose revenue. Because we have agreed to the taxation at the last point and in view of the fact that section 15 of the Central Act has not been brought into force, we have been put to a lot of difficulty. Therefore, we want to put the tax at the first point. My friend Sri Mariappa will explain it in detail when it is taken up. I only request the House to agree with me that we shall adjourn at 12-30 and meet again at 4-30 and take up these two Bills. I hope the House will be kind enough to allow these two Bills to be taken up at 4-30 P.M. and pass them before we rise this evening. They may not take more than an hour or two. I hope the House will agree to my proposal.

Mr. DEPUTY SPEAKER.—So, we shall continue discussion on Jatti Committee Report till 12-30 and adjourn and meet again at 4-30 and take up the Bills.

REPORT OF THE MYSORE TENANCY AGRICULTURAL LAND LAWS COMMITTEE.

(Debate continued)

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೃಷ್ಣರಾಜನಗರ).—ಸ್ವಾಮಿ ಇನ್ನು ನಮ್ಮ ಮುಂದೆ ಇರತಕ್ಕಂಥ ಜತ್ತಿ ಸಮಿತಿಯವರ ರಿಪೋರ್ಟ್. ಇದು ಭೂ ಸ್ವಾಮ್ಯಕ್ಕೆ ಮತ್ತು ಭೂಮಿಯ ಹಂಚಿಕೆಗೆ ಸಂಬಂಧಪಟ್ಟಂಥ ಒಂದು ವರದಿ. ಈ ವರದಿಯ ಮೇಲೆ ನನ್ನ ಅಭಿಪ್ರಾಯವನ್ನು ಸೂಚನೆಮಾಡುವುದರ ಮುನ್ನ ಸಮಿತಿಗೆ ಸಂಬಂಧಪಟ್ಟಹಾಗೆ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಈ ಮಹತ್ವವಾದಂಥ ಪ್ರಶ್ನೆಯನ್ನು ಪರಿಶೀಲನೆಮಾಡಿ ವಿಮರ್ಶೆಮಾಡಿ ಹೊಸ ಸಂಸ್ಥಾನದ ಆದ್ಯಂತ ಅನ್ವಯಿಸುವಂಥ ಒಂದು ವ್ಯವಸ್ಥಿತವಾದಂಥ ಯೋಜನೆಯನ್ನು ತಯಾರುಮಾಡಿಕೊಡಿ ಎಂದು ಹೇಳಿ ಸರ್ಕಾರದವರು ಈ ಸಮಿತಿಯನ್ನು ಏರ್ಪಡಿಸಿದರು. ಈ ಸಮಿತಿಯವರು ಈ ಪ್ರಶ್ನೆಯ ಮಹತ್ವವನ್ನು ಅರಿತು ಇದರ ತೀವ್ರತೆಯನ್ನು ಮನಗಂಡು ಬಹಳ ಶ್ರಮಪಟ್ಟು ಕೇವಲ ಅತ್ಯಲ್ಪ ಕಾಲದಲ್ಲಿ ಈ ಮಹತ್ವವಾದಂಥ ಪ್ರಶ್ನೆಯನ್ನು ಎಲ್ಲ ದೃಷ್ಟಿಯಿಂದಲೂ ಪರಿಶೀಲನೆಮಾಡಿ ಅವರ ಅಮೂಲ್ಯವಾದ ಸಲಹೆಯನ್ನು ತ್ವರಿತವಾಗಿ ನಮ್ಮ ಸಭೆಯ ಮುಂದೆ ಇಡುವುದಕ್ಕಾಗಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದ್ದಾರೆ. ಅವರು ಮಾಡಿರತಕ್ಕ ಸಲಹೆಗಳ ಬಗ್ಗೆ ಯಾರು ಯಾರಿಗೆ ಯಾವಯಾವ ಭಿನ್ನಾಭಿಪ್ರಾಯಗಳು ಇದ್ದರೂ ಸರಿ ಅವರು ಮಾಡಿದ ಕೆಲಸ ಮಾತ್ರ ಬಹಳ ಮಹತ್ವವಾದಂಥ ಕೆಲಸ. ಅದಕ್ಕಾಗಿ ಜತ್ತಿ ಸಮಿತಿಯವರಿಗೆ ಈ ಬಗ್ಗೆ ನಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುವುದು ನನ್ನ ಪ್ರಥಮ ಕರ್ತವ್ಯ. ಈ ಭೂ ಸಾಮ್ಯ ಇಂಡಿಯಾ ದೇಶದಲ್ಲಿ ಹಾಗೂ ಮೈಸೂರು ದೇಶದಲ್ಲಿ ಅಷ್ಟೇಅಲ್ಲ. ಇಡೀ ಪ್ರಪಂಚದಲ್ಲಿ ಇದು ಮಹತ್ವವಾದಂಥ ಪ್ರಶ್ನೆಯಾಗಿ ಪರಿಗಣಿಸಲ್ಪಟ್ಟಿದೆ. ಅದರ ಕಾರಣ ನಾನು ಹೇಳಬೇಕಾಗಿಲ್ಲ. ಮುಂದಿನ ಜೀವನಕ್ಕೆ ಆಗಬೇಕಾಗಿರತಕ್ಕ ಸಕಲ ಆವಶ್ಯಕತೆ ಕೂಡ ಭೂಮಿಯ ಉತ್ಪನ್ನದಿಂದಲೇ ಆಗಬೇಕು ; ಮತ್ತು ಅವು ಒಂದಲ್ಲಒಂದು ರೀತಿಯಲ್ಲಿ ಈ ಭೂಮಿಗೆ ಸಂಬಂಧಪಟ್ಟಿವೆ. ಆದ್ದರಿಂದ ಈ ಪ್ರಶ್ನೆ ದೇಶದ ಮುಂದೆ ಇರತಕ್ಕ ಪ್ರಶ್ನೆಗಳಿಗಿಂತಲೂ ಮಹತ್ವಪೂರಿತವಾದುದು. ಈ ಪ್ರಶ್ನೆಗೆ ಹಿಂದಿನ ಕಾಲದಲ್ಲಿ ಇಷ್ಟು ಮಹತ್ವ ಇರಲಿಲ್ಲ. ಕಾರಣ ಈಗಿರತಕ್ಕ ಪ್ರಜಾಸಂಖ್ಯೆಗಿಂತ ಆಗ ಅದು ಬಹಳ ಕಡಿಮೆಯಿತ್ತು. ಭೂಮಿ ವಿಶಾಲವಾಗಿತ್ತು. ಮತ್ತು ಆಗಿನ ಪ್ರಜೆಗಳಿಗೆ ಅವಶ್ಯಕವಾಗಿ ಬೇಕಾದಂಥ ಸೌಕರ್ಯಗಳು ಸಲೀಸಾಗಿ ಒದಗಿಬರುತ್ತಿದ್ದವು. ಕ್ರಮೇಣ ಪ್ರಜಾಸಂಖ್ಯೆ ಪ್ರಪಂಚದಲ್ಲಿ ಹೆಚ್ಚಿದಂತೆಲ್ಲಾ, ಭೂಮಿಯನ್ನು ಆಕ್ರಮಣಮಾಡುವಂಥ ಮನೋಭಾವ ಜನರಲ್ಲೂ, ಸಮಾಜದಲ್ಲೂ ಹಾಗೂ ದೇಶದಲ್ಲೂ ಕೂಡ ಪ್ರಾರಂಭವಾಯಿತು. ಚರಿತ್ರೆಯಲ್ಲಿ ತಾವು ನೋಡುವುದಾದರೆ, ಯಾವಯಾವ ದೇಶದಲ್ಲಿ ಜನಗಳ ಒತ್ತಡ ಹೆಚ್ಚಿತೋ ಆ ದೇಶಗಳಲ್ಲಿ ಜಮೀನು ಆಕ್ರಮಣ ಹೆಚ್ಚಾಗಿದೆ. ಆ ದೇಶಗಳ, ಜಮೀನುಗಳ ಆಕ್ರಮಣ ಪ್ರಜಾಸಂಖ್ಯೆಗೆ ಅನುಗುಣವಾಗಿ ಮೊದಲಿಗಿಂತ ಹೆಚ್ಚಾಯಿತು. ಯುದ್ಧಗಳ ಪ್ರಚೋದನೆ ಆಗಬೇಕಾದರೆ, ಭೂಮಿಯ ಆಕ್ರಮಣದಿಂದಲೇ ಹೆಚ್ಚಿಗೆ ಯುದ್ಧಗಳು ನಡೆದಿವೆ ಎಂಬುದು ಸಾಮಾನ್ಯವಾಗಿ ಚರಿತ್ರೆಯನ್ನು ಓದುವವರಿಗೆ ಗೊತ್ತು. ಆದ್ದರಿಂದ ಈ ಮಹತ್ವದ ಪ್ರಶ್ನೆಯನ್ನು ನಾವು ಇಂದಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾತ್ರವಲ್ಲ ಇನ್ನೂ 20-30 ವರ್ಷಗಳಲ್ಲಿ ಪರಿಸ್ಥಿತಿ ಹೇಗಾಗಬಹುದು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಭೂಸುಧಾರಣ, ಈ ಭೂಮಿಯ ಪದ್ಧತಿಯ ನೀತಿಯನ್ನು ಹಾಕಬೇಕು. ಮಹಾಯುದ್ಧ ಆದಮೇಲೆ, ಪಾಶ್ಚಾತ್ಯದಲ್ಲಿ ಅನೇಕ ರಾಷ್ಟ್ರಗಳು ಸ್ವತಂತ್ರವಾಗಿ ಹೊಟ್ಟಪೊದಲು ಈ ಭೂ ಸುಧಾರಣೆಯನ್ನು ಪ್ರಾರಂಭಮಾಡಿದರು. ಹಾಗೂ ಎರಡನೆಯ ಯುದ್ಧಾನಂತರದಮೇಲೆ ಇನ್ನು ಬೇರೆ ಯಾವಯಾವ ಪ್ರಾಂತಗಳು ಹಿಂದುಳಿದಿದ್ದವೋ ಆ ಪ್ರಾಂತಗಳು ಕೂಡ ಭೂಸುಧಾರಣೆಗೆ ಅಗ್ರ ಸ್ಥಾನವನ್ನು ಕೊಡಬೇಕಾಯಿತು. ಒಟ್ಟಿನಲ್ಲಿ ಪ್ರಪಂಚದಲ್ಲೆಲ್ಲ ಈ ಭೂಸುಧಾರಣೆ ಮತ್ತು ಭೂಮಿಯ ಒಡೆತನದ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಬಗ್ಗೆ ಯಾವಯಾವ ದೇಶ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡವು, ಮತ್ತು ಯಾವಯಾವ ನೀತಿಯನ್ನು ಅನುಸರಿಸಿದುವು ಎನ್ನುತಕ್ಕದ್ದನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡಪಕ್ಷದಲ್ಲಿ ನಾವು ಭೂಸುಧಾರಣೆ ಮತ್ತು ಭೂಮಿಯ ವ್ಯವಸಾಯಮಾಡಲಿಕ್ಕೆ ಅನುಕೂಲವಾಗುತ್ತದೆ. ಒಟ್ಟು ಈ ಪ್ರಪಂಚದ ರಾಷ್ಟ್ರಗಳನ್ನೆಲ್ಲ ತೆಗೆದುಕೊಂಡರೆ ಇವುಗಳನ್ನು ಮೂರು ಭಾಗಗಳಾಗಿ ವಿಂಗಡಣೆಮಾಡಬಹುದು.

ಭೂಮಿಯ ಉಪಯೋಗ ಎಂದರೆ, ಭೂಮಿಯ ಸ್ವಾಮ್ಯ ಮೊದಲನೆಯದು ಇದು ಲ್ಯಾಂಡು ಸೆಟಲ್‌ಮೆಂಟು ಜೋನ್, ಎಂದರೆ ಭೂ ವಲಯ, ಭೂಮಿಯನ್ನು ವ್ಯವಸ್ಥೆಮಾಡತಕ್ಕದ್ದು. ಎರಡನೆಯದು, ಲ್ಯಾಂಡು ರಿಫಾರಂ ಜೋನ್, ಎಂದರೆ ಭೂಮಿಯ ಸುಧಾರಣೆಯ ವಲಯ, ಇನ್ನು ಮೂರನೆಯದು, ಭೂಕ್ರಾಂತಿಯ ವಲಯ, ಎಂದರೆ, ಲ್ಯಾಂಡು ರೆವಲ್ಯೂಷನರಿ ಜೋನ್, ಹೀಗೆ ಮೂರು ವಲಯಗಳಾಗಿ ಈ ಭೂಮಿಯನ್ನು ವಿಭಾಗಮಾಡಬಹುದು. ಒಂದೊಂದು ವಲಯದಲ್ಲಿ ಒಂದೊಂದು ರೀತಿಯ ಸುಧಾರಣೆ ಮತ್ತು ಭೂಮಿಯ ಉಪಯೋಗವನ್ನು ಒಂದೊಂದು ರೀತಿಯಲ್ಲಿ ವ್ಯವಸ್ಥೆಮಾಡಿದ್ದಾರೆ. ಅದರ ಅನುಭವವನ್ನು ನಾವು ದೃಷ್ಟಿಯಲ್ಲಿ ಇಟ್ಟುಕೊಂಡು ಅದು ಯಾವ ರೀತಿಯಲ್ಲಿ ಸಹಾಯವಾಗುತ್ತದೆ ಮತ್ತು ಅದರಲ್ಲಿ ನಾವು ಯಾವ ಗುಂಪಿಗೆ ಸೇರಿದವರು ಎನ್ನುವುದನ್ನು ಪೊಟ್ಟಮೊದಲು ನಿರ್ಧಾರ ಮಾಡಬೇಕು. ನಾವು ಈ ಲ್ಯಾಂಡು ಸೆಟಲ್‌ಮೆಂಟು ಒಕ್ಕಲುತನಕ್ಕೆ ಸೇರಿದವರೇ, ಇಲ್ಲ ಲ್ಯಾಂಡು ರಿಫಾರಂ ಜೋನಿಗೆ ಸೇರಿದವರೇ ಅಥವಾ ಲ್ಯಾಂಡು ರೆವಲ್ಯೂಷನ್ ಎಂದರೆ ಭೂ ಕ್ರಾಂತಿ ವಲಯಕ್ಕೆ ಸೇರಿದವರೇ ಎನ್ನುವುದನ್ನು ಯೋಚನೆಮಾಡಬೇಕು. ಇಂಡಿಯ ದೇಶದಲ್ಲಿಯೂ ಕೂಡ ಇಂತಹ ಪರಿಸ್ಥಿತಿ ಬಂದಕಾಲದಲ್ಲಿ ಈ ಭೂ ಸ್ವಾಮ್ಯದ ಬಗ್ಗೆ ಭೂಸುಧಾರಣೆ ಮಾಡಬೇಕು ಮತ್ತು ಭೂಮಿಯನ್ನು ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುವಂತೆ ಮಾಡತಕ್ಕದ್ದು ಎಂದು ಅದಕ್ಕಾಗಿ ಪೊಟ್ಟಮೊದಲು ಮುಂದಿನ ಕಾರ್ಯಕ್ರಮವನ್ನು ನಿರ್ಧಾರಮಾಡಿದ್ದಾರೆ. ಈ ಮೂರು ವಲಯಗಳಲ್ಲಿ ನಾವು ಯಾವ ಗುಂಪಿಗೆ ಸೇರತಕ್ಕದ್ದು ಎನ್ನುವ ವಿಷಯದಲ್ಲಿ ನಮ್ಮ ಥೋರಣೆಯನ್ನೂ ಕೂಡ ನಾವು ವಿಚಾರಮಾಡಬೇಕು. ಉಳಿದಿರುವ ದೇಶಗಳಲ್ಲಿ ಯಾವ ಯಾವ ದೇಶಗಳು ಯಾವ ಯಾವ ಗುಂಪುಗಳಿಗೆ ಸೇರಿದವು ಎನ್ನುವುದನ್ನೂ ನಭೆಯ ಅವಗಾಹನೆಗೆ ತಂದರೆ ಅನುಕೂಲವಾಗುತ್ತದೆ.

ಈ ಸೆಟಲ್‌ಮೆಂಟು ಜೋನಿಗೆ ಸೇರಿದವು, ಇಂಗ್ಲೆಂಡು, ಫ್ರಾನ್ಸ್, ಇಟಲಿ, ಬಲ್ಜಿರಿಯಾ, ಡೆನ್‌ಮಾರ್ಕ್, ನಾರ್ವೆ, ಸ್ವೀಡನ್ ಮುಂತಾದುವು.

ಇನ್ನು ಲ್ಯಾಂಡು ರಿಫಾರಂ ಜೋನಿಗೆ ಎಂದರೆ ಭೂಸುಧಾರಣೆಯ ವಲಯಕ್ಕೆ ಸೇರಿದವು, ಬೆಲಜಿಯಂ, ಹಂಗೇರಿ, ಫಿನ್‌ಲೆಂಡು, ಹಾಲೆಂಡು, ರೊಮೇನಿಯಾ, ಜೆಕೋಸ್ಲೊವಾಕಿಯ, ಯುಗೋಸ್ಲೇವಿಯಾ ಮತ್ತು ರೆಸ್ಟ್ರೋನಿಯಾ ಮತ್ತು ಪ್ರೆಸ್ಟ್ರೋನಿಯ.

ಮೂರನೆಯದಾದ ಭೂಕ್ರಾಂತಿ ವಲಯಕ್ಕೆ ಸೇರಿದವು, ಚೈನಾ ಮತ್ತು ರಷ್ಯಾ.

ಈಗ ನಾವು ಈ ಭೂಮಿಯ ಸ್ವಾಮ್ಯವನ್ನು ಯಾವ ಮಾರ್ಗದಲ್ಲಿ ತೆಗೆದುಕೊಂಡು ಹೋಗಬೇಕು ಎನ್ನುವುದನ್ನು ಪೊದಲು (ನಾವೆಲ್ಲ ಸೇರಿ) ಭರತಖಂಡದವರು ತೀರ್ಮಾನಮಾಡಬೇಕು. ಈಗ ನಾವು ಇರತಕ್ಕಂತ ಹದು ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಈ ಪ್ರಜಾಪ್ರಭುತ್ವದಲ್ಲಿ ಈ ಮಹತ್ವವಾದ ಪ್ರಶ್ನೆಯನ್ನು ಬಿಡಿಸಬೇಕಾಗಿದೆ. ಯಾವ ಒಂದು ವಲಯಕ್ಕೆ ಸೇರಿರತಕ್ಕದ್ದು ಎನ್ನುವಂತಹ ದೃಷ್ಟಿಯಲ್ಲಿ ನಾವು ಕೆಲಸಮಾಡಬೇಕು. ಈಗ ನಮ್ಮಲ್ಲಿ ಲ್ಯಾಂಡು ಸೆಟಲ್‌ಮೆಂಟು ಜೋನು ಇದೆ, ಇದು ಕ್ಯಾಪಿಟಲಿಸ್ಟು ಫಾರ್ಮಿಂಗ್ ಗುಂಪಿಗೆ ಸೇರುತ್ತದೆ. ಅವು ಅಮೇರಿಕಾ, ಇಂಗ್ಲೆಂಡು, ಫ್ರಾನ್ಸ್ ಮುಂತಾದುವು. ಇಲ್ಲಿ ಭೂಮಿಯನ್ನು ಯಾವ ಪ್ರಮಾಣದಲ್ಲಿ ಪಡೆಯಬೇಕು ಮತ್ತು ಅದರ ಉಪಯೋಗದ ಬಗ್ಗೆ ಕೆಲವು ನಿರ್ದಿಷ್ಟವಾದ ವಿಧಿಗಳನ್ನು ಹಾಕಿಕೊಂಡು ಆಯಾ ದೇಶದ ಹಿತದೃಷ್ಟಿಯಿಂದ ಯಾವಯಾವ ನಿಯಮಗಳನ್ನು ಅಥವಾ ವಿಧಿಗಳನ್ನು ಹಾಕಬೇಕೋ ಅದರಂತೆ ವ್ಯವಸಾಯ ನಡೆಸುತ್ತಿದ್ದಾರೆ. ವ್ಯವಸಾಯ ಮಾಡತಕ್ಕವರಿಗೂ ಭೂಮಿಯ ಒಡೆಯನಿಗೂ ಯಾವ ವಿಧವಾದ ಸಾಮರಸ್ಯವಿರಬೇಕು, ಎಷ್ಟು ಭೂಮಿಯನ್ನು ವ್ಯವಸಾಯ ಮಾಡಬೇಕು ಎನ್ನುವುದನ್ನು ನೋಡಿಕೊಂಡು ವ್ಯವಸಾಯದ ಉತ್ಪನ್ನವನ್ನು ದೇಶಕ್ಕೆ ಒದಗುವಂತೆ ಮಾಡತಕ್ಕದ್ದು ಎನ್ನುವುದೆಲ್ಲ ಇಲ್ಲಿ ಬರುತ್ತದೆ.

ಇನ್ನು ಲ್ಯಾಂಡು ರಿಫಾರಂ ಜೋನು ; ಇಲ್ಲಿ ಭೂಮಿಯನ್ನು ಪಡೆಯುವ ಒಂದು ಹಕ್ಕು ಬರುತ್ತದೆ. ಅದರಂತೆ ಭೂಮಿಯನ್ನು ಪಡೆಯತಕ್ಕದ್ದು. ದೇಶದ ಹಿತದೃಷ್ಟಿಯಿಂದ ಯಾವಯಾವ ಮಟ್ಟದಲ್ಲಿ ಮಾರ್ಪಾಡು ಆಗಬೇಕೋ ಅವೆಲ್ಲವನ್ನೂ ವ್ಯವಸ್ಥೆಮಾಡಿ ಪೂರ್ವದ ಆಡಳಿತಕ್ಕಿಂತ ಸ್ವಲ್ಪ ಆಕರ್ಷಯುತವಾದ ಮಾರ್ಗದಲ್ಲಿ ಈ ಭೂಮಿಯ ವ್ಯವಸ್ಥೆಯನ್ನು ಮಾಡತಕ್ಕದ್ದು ಈ ಭೂಸುಧಾರಣೆ.

ಇನ್ನು ಮೂರನೆಯದು, ಭೂಮಿಯ ಕ್ರಾಂತಿ. ಇಡೀ ಭೂಸ್ವಾಮ್ಯವನ್ನು ದೇಶದ ಕಾಯಿದೆಯನ್ನು ಇಟ್ಟುಕೊಂಡು ದೇಶದ ಹಿತದೃಷ್ಟಿಯಿಂದ ಈ ಭೂಮಿಯ ಆಡಳಿತವನ್ನು ಯಾವ ರೀತಿಯಾಗಿ ವ್ಯವಸ್ಥೆ ಮಾಡಬೇಕಾಗಿತ್ತು ಜನರು ಯಾವ ರೀತಿಯಾಗಿ ಇಟ್ಟುಕೊಳ್ಳಬೇಕು ಮತ್ತು ದೇಶದ ಹಿತದೃಷ್ಟಿಯಿಂದ ಹೇಗೆ ಕೆಲಸಮಾಡತಕ್ಕದ್ದು ಎನ್ನುವುದು ಈ ಭೂ ಕ್ರಾಂತಿ ವಲಯದ ವಿಷಯವಾಗಿದೆ. ಈಗ ನಾವು ಪ್ರಜಾಪ್ರಭುತ್ವದ ಅಡಿಯಲ್ಲಿ ಕೆಲಸಮಾಡುತ್ತಿರುವುದರಿಂದ ಈ ಭೂ ಕ್ರಾಂತಿವಲಯಕ್ಕೆ ಸೇರುವುದು ಕಷ್ಟವಾಗುತ್ತದೆ. ಒಂದು ವೇಳೆ ಒಳ್ಳೆಯದೆಂದು ಕಂಡುಕೊಂಡಪಕ್ಷದಲ್ಲಿ ಅದಕ್ಕೆ ಸೇರಲು ನನ್ನ ಅಭ್ಯಂತರವೇನೂ ಇಲ್ಲ ಇನ್ನು ಲ್ಯಾಂಡು ಸೆಟಲ್‌ಮೆಂಟು ಜೋನಿಗೂ ಸೇರುವುದಕ್ಕೆ ಆಗುವುದಿಲ್ಲ. ಹೀಗೆ ಈ ಎರಡು ಗುಂಪಿಗೂ ನಾವು ಸೇರುವುದಕ್ಕೆ ಆಗುವುದಿಲ್ಲ. ಇನ್ನು ನಾವು ಲ್ಯಾಂಡು ರಿಫಾರಂ ಜೋನಿಗೇ ಸೇರಿದಂತೆ ಕೆಲಸಮಾಡುತ್ತಿದ್ದೇವೆ. ಹೀಗೆ ಮಾಡುವಾಗ ನಮ್ಮ ಗುರಿ ಏನು ಎನ್ನುವುದನ್ನು ನಿರ್ದಿಷ್ಟವಾಗಿ ಇಲ್ಲಿ ಅಧಿಕಾರದಲ್ಲಿರತಕ್ಕವರು ತಿಳಿಯಬೇಕಾದುದು ಅವಶ್ಯಕ. ಈ ಲ್ಯಾಂಡು ರಿಫಾರಂ ಜೋನಿನಲ್ಲಿ ಭೂಮಿಯ ಸ್ವಾಮ್ಯವನ್ನು ಒಂದು ಪ್ರಮಾಣದ ಆಧಾರದ ಮೇಲೆ ಇಟ್ಟುಕೊಳ್ಳಬೇಕಾದುದು ಅವಶ್ಯಕ. ಅದು ಹೇಗೆ ಇಟ್ಟುಕೆಳ್ಳಬೇಕೆಂಬುದು, ಬೇರೆ ವಿಷಯ. ಆ ಸ್ವಾಮ್ಯವನ್ನು ಬಿಟ್ಟು ದೇಶದ ಹಿತದೃಷ್ಟಿಯಿಂದ ವ್ಯವಸಾಯನಿಯಮಕ್ಕೆ ಮತ್ತು ವಿಧಿಗೆ ಅನುಗುಣವಾಗಿ ವ್ಯವಸ್ಥೆಮಾಡಬೇಕು ಎನ್ನುವುದಾಗಿದೆ. ಆದುದರಿಂದ ಈ ಭೂಸುಧಾರಣೆಯ ಜೋನಿಗೆ ಸೇರುವುದು ಯುಕ್ತವಾದುದು. ಈಗ ಇನ್ನೊಂದು ಪೆಸೆಂಟ್ರಿ ಪ್ರೊಪ್ರೈಟರ್‌ಷಿಪ್ (Peasantry Proprietor-

ship) ಎಂದಿದೆ. ಇದರಲ್ಲಿ ಯಾವನು ಭೂಮಿಯ ವ್ಯವಸಾಯವನ್ನು ಮಾಡುತ್ತಿರುತ್ತಾನೋ ಅವನು ಭೂಮಿಯ ಒಡೆಯನಾಗಬೇಕು ಎನ್ನುವ ಮೂಲ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ಇದನ್ನು ನಿಷ್ಕಾರಣವಾಗಿ ಒಪ್ಪಿಕೊಂಡಿಲ್ಲ. ಈ ಭೂಮಿಯಿಂದ ಬರತಕ್ಕ ಉತ್ಪನ್ನವೇನು ಮತ್ತು ಎಷ್ಟು ಪ್ರಮಾಣದಲ್ಲಿ ಉತ್ಪನ್ನವಾಡಬೇಕು ಎನ್ನುವ ವಿಚಾರದಲ್ಲಿ ಭೂಮಿ ನನ್ನದು ಎನ್ನತಕ್ಕ ಅಭಿಮಾನ ಭೂಮಿಯಲ್ಲಿ ವ್ಯವಸಾಯ ಮಾಡತಕ್ಕವನಿಗೆ ಇಲ್ಲದಿದ್ದರೆ ಆ ಭೂಮಿಯಿಂದ ಉತ್ಪನ್ನವಾಡುವ ಪ್ರಮಾಣದಲ್ಲಿ ಮಾಡಲು ಸಾಧ್ಯವಿಲ್ಲ. ಈ ಒಂದು ಮಹತ್ತರವಾದ ಕಾರಣದಿಂದ Ownership incentive, ಇದಕ್ಕೆ ಮಹತ್ವವಾದುದರಿಂದ ಇದಕ್ಕೆ ಕೊಡಬೇಕು. ಆದರೆ ಜನಗಳಿಗೆ Employment ಕೆಲಸಕಾರ್ಯಗಳನ್ನು ದೊರಕಿಸತಕ್ಕದ್ದು ಮತ್ತು ವ್ಯವಸಾಯವನ್ನು ಅಭಿವೃದ್ಧಿ ಮಾಡತಕ್ಕದ್ದು ಈ ಕಾರಣದಿಂದ ಇದನ್ನು ನಾವು ಒಪ್ಪಿಕೊಂಡಿದ್ದೇವೆ. ಈಗ ನಮ್ಮಲ್ಲಿ ಮೂರು ಥೋರಣೆಗಳಿಗೆ ಮಹತ್ವವನ್ನು ಕೊಟ್ಟಿದ್ದೇವೆ, ಅದೇನೆಂದರೆ, ಒಂದು ಕಡೆ ಪೆಸೆಂಟ್ರಿ ಪ್ರೊಪ್ರೈಟರ್‌ಷಿಪ್ಪು ಆಗಬೇಕು ಎನ್ನತಕ್ಕ ಕಾನೂನಿನ ಬಗ್ಗೆ ವಿಧಿವತ್ತಾದ ನಿಯಮಗಳನ್ನು ಜಾರಿಗೆ ತರಬೇಕೆಂದು ಒಪ್ಪಿಕೊಂಡಿದ್ದೇವೆ, ಎಂದರೆ ವೈಯಕ್ತಿಕವಾಗಿ ಭೂಮಿಯ ಒಡೆತನಕ್ಕೆ ಮಹತ್ವ ಕೊಟ್ಟಿದ್ದೇವೆ. ಇನ್ನೊಂದು ಕಡೆ Co-operative Farming ಆಗಬೇಕು ಎನ್ನುವಾದವಿದೆ ಮತ್ತೊಂದು ಕಡೆ ಇವೆರಡೂ ಪ್ರಯೋಜನವಿಲ್ಲ, ಭೂಮಿಯ ಒಡೆತನ ಇರುವುದರಿಂದಲೇ ಇದರಲ್ಲಿ ಒಂದು ರೀತಿಯಾದ ಆಧ್ಯಾತ್ಮಿಕವಾದ ಪರಿವರ್ತನೆಯಾಗುವುದಿಲ್ಲ ಆದುದರಿಂದ ಭೂಮಿಯ ಒಡೆತನ ಹೋಗಬೇಕು, ಹಾಗೆ ಹೋಗುವುದರಲ್ಲಿ ಅಮಲಬಲೋದ್ಬಂಧನದಿಂದ ಹೋಗುವುದು ನಿಯಲ್ಲ, ಆಧ್ಯಾತ್ಮಿಕವಾಗಿ ಪರಿವರ್ತನೆಯಾಗಬೇಕು, ನಾನು ನನ್ನದು ಎನ್ನುವ ಮನೋಭಾವನೆ ಹೋಗಿ ಇಡೀ ಪ್ರಪಂಚದಲ್ಲೆಲ್ಲ ಜನಗಳಲ್ಲಿ ಸುಖಶಾಂತಿ ನೆಲಸಬೇಕು ಎನ್ನುವುದು ಒಂದು ವಾದ.

ನಾವೇನಾದರೂ ಈ ವ್ಯವಸಾಯದ ವಿಚಾರದಲ್ಲಿ ಡೋಲಾಯಮಾನವಾಗಿ ಹೋದಲ್ಲಿ ದೇಶ ಅಧೋಗತಿಗೆ ಬರುತ್ತದೆ. ಆದ್ದರಿಂದ ಈ ಮೂರು ವಿಷಯಗಳನ್ನು ಚೆನ್ನಾಗಿ ಚರ್ಚಿಸಿ ವಿಮರ್ಶಿಸಿ ದೇಶಕ್ಕೆ ಯಾವುದು ಒಳ್ಳೆಯದು ಎಂಬುದನ್ನು ನಿರ್ಧಾರಮಾಡಿಕೊಳ್ಳಬೇಕು. ಅಂದರೆ ಮುಂದಿನ ನಮ್ಮ ಮಾರ್ಗ ಅನುಕೂಲವಾಗುತ್ತದೆ. ಸದ್ಯಕ್ಕೆ ಭೂಸ್ವಾಮಿತ್ವದಲ್ಲಿ ಅನೇಕ ಲೋಪದೋಷಗಳಿವೆ. ಇವು ಇರಕೂಡದು. ಏಕೆಂದರೆ ಅವುಗಳಿಂದ ದೇಶದ ಹಿತಸಾಧನೆಯಾಗುವದಿಲ್ಲ. ಭೂಸುಧಾರಣೆಯ ವಿಷಯದಲ್ಲಿ ನಾವು ಒಂದು ನಿರ್ದಿಷ್ಟ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಆಧ್ಯಾತ್ಮಿಕ ಪರಿವರ್ತನೆಯಾಗಬೇಕು. ಈ ಮೂಲ ಗುರಿಯನ್ನು ಇಟ್ಟುಕೊಂಡು ಕಾರ್ಯಕ್ರಮವನ್ನು ಹಾಕಿಕೊಳ್ಳೋಣ. ಭೂಸುಧಾರಣೆಯಲ್ಲಿ ನಾವು ಕೊಂಚ ನಿಧಾನವಾಗಿ ಹೋದರೆ ಅದರಲ್ಲಿ ಅನೌಚಿತ್ಯ ಏನೂ ಇಲ್ಲ. ಉಳುವವನಿಗೆ ಒಡೆತನ ಇರಬೇಕೆಂದು ನನ್ನ ಖಚಿತ ಅಭಿಪ್ರಾಯ. ಈ ನೀತಿಯನ್ನು ಕೊಂಚ ಕಾಲ ಕೆಲಸಮಾಡಿ, ನ್ಯೂನತೆ ಇರುವುದನ್ನು ಗಮನಿಸಿ ಅನಂತರ ಬೇರೆ ನೀತಿಯನ್ನು ಹಿಡಿಯಬೇಕು. ಇದನು ಬಿಟ್ಟು ಕೇವಲ ತತ್ತ್ವಬೋಧನೆಯಿಂದ ಪರಿವರ್ತನೆಯಾಗುವುದಿಲ್ಲ. ದೇಶಾದ್ಯಂತ ಭೂಮಿಯ ಒಡೆತನವನ್ನ ಸಮಾಜದ ಸ್ವಾಮಿತ್ವಕ್ಕೆ ತೆಗೆದುಕೊಂಡು ಕ್ರಾಂತಿಕಾರಕ ಬದಲಾವಣೆಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳೋಣ. ಇದರಲ್ಲಿ ತೊಂದರೆ ಏನು, ಪ್ರತಿಕೂಲ ಏನು ಎಂಬುದನ್ನು ಆಲೋಚನೆಮಾಡಿ ಮುಂದಿನ ಮಾರ್ಗವನ್ನು ನಿರ್ಧರಿಸುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಕಾನೂನುಗಳನ್ನು ಮಾಡುವಾಗ ಉತ್ಪಾದನೆಯ ಕಡೆಗೆ ಲಕ್ಷ್ಯ ಕೊಡಬೇಕು. ಭೂಮಿಯ ಮೇಲೆ ಜನರ ಒತ್ತಡ ಕಡಮೆಯಾಗಬೇಕು ಎಂದು ಹಲವಾರು ಭೂಸುಧಾರಣಾ ಸಮಿತಿಗಳು ಅಭಿಪ್ರಾಯಪಟ್ಟಿವೆ. ನಮ್ಮ ದೇಶದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಭೂಮಿಯ ಹಂಚು ವಿಕೆಯು ಆಗದೆ ಇದ್ದುದರಿಂದ ಬಹಳ ಅಸಮಾಧಾನ ಉಂಟಾಗಿದೆ. ಈಗಿನ ನಮ್ಮ ಡೆಮಾಕ್ರಸಿಯಲ್ಲಿ ಈ ರೀತಿ ಇರುವುದನ್ನು ನೋಡಿದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಈ ವಿಷಯವನ್ನು ಚರ್ಚಿಸಬೇಕು, ವಿಮರ್ಶೆಮಾಡಬೇಕು. ಆದುದರಿಂದ ಭೂಸುಧಾರಣೆಯ ಕಾರ್ಯಕ್ರಮದಲ್ಲಿ ಸ್ವಲ್ಪ ಮಟ್ಟಿಗೆ ನಿಧಾನವಾಗಿ ಹೋದರೆ ಆದರಲ್ಲಿ ಅನೌಚಿತ್ಯ ವೇನೂ ಇಲ್ಲ. ಏಕೆಂದರೆ ಭೂಸುಧಾರಣೆಯ ವ್ಯವಸ್ಥೆಯಲ್ಲಿ ಇಡಿಯ ರಾಷ್ಟ್ರದ, ಸಮಾಜದ ತಳಹದಿಹಾಕಲಾಗುತ್ತದೆ. ಭೂಮಿಯು ಉಳುವವನಿಗೆ ಮಾತ್ರ ಸಂಬಂಧಪಟ್ಟ ವಿಷಯವೆಂದು ತಿಳಿದುಕೊಂಡರೆ ಆದು ಒಂದು ಭ್ರಾಂತಿ ನಮ್ಮ ದೇಶದಲ್ಲಿ 100ಕ್ಕೆ 90ರಷ್ಟು ಜನರು ಭೂಮಿಯನ್ನು ಎಂದರೆ ವ್ಯವಸಾಯವನ್ನವಲಂಬಿಸಿದ್ದಾರೆ. ಆದುದರಿಂದ ಎಲ್ಲಾ ವರ್ಗದ ಜನರೂ ಭೂಸುಧಾರಣೆಯ ಮೂಲಕ ಭೂಸ್ವಾಮಿತ್ವವನ್ನು ಹಡೆಯುವಂತೆ ಕ್ರಮ ತೆಗೆದುಕೊಳ್ಳುವ ಮನೋಭಾವದಿಂದ, ಇದು ಇಡಿಯ ಸಮಾಜಕ್ಕೆ ಸಂಬಂಧಪಟ್ಟದ್ದೆಂದು ತಿಳಿದುಕೊಂಡು ಕಾರ್ಯಾಚರಣೆ ಮಾಡಬೇಕು. 37 ಕೋಟಿ ಜನರಿಗೆ ಅನ್ನ ಮತ್ತು ಬಟ್ಟೆ ಒದಗಿಸತಕ್ಕ ಕೆಲಸವಾಗಿದೆ. ಆದುದರಿಂದ ವೈಯಕ್ತಿಕ ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಬಾರದು. ಈ ಸಮಸ್ಯೆಯನ್ನು ಮೊದಲು ಬಗೆಹರಿಸಬೇಕು. ಯಾವ ತೀರ್ಮಾನವನ್ನು ತೆಗೆದುಕೊಂಡರೂ ಸದ್ಯಕ್ಕಿರುವ ownership ಮತ್ತು proprietorship ನಿಲ್ಲಬೇಕು. ಉಳುವವನಿಗೆ ಒಡೆತನ ಇರಬೇಕೆಂದು ನನ್ನ ಖಚಿತ ಅಭಿಪ್ರಾಯ. ಈ ನೀತಿಯನ್ನು ಕೆಲವು ಕಾಲ ಪ್ರಯೋಗ ಮಾಡಿ ನೋಡಿ ಇದರಲ್ಲಿ ತೊಂದರೆ ಏನಾದರೂ ಕಂಡು ಬಂದರೆ ಅನಂತರ ಬೇರೆ ನೀತಿಯನ್ನು ಅನುಸರಿಸಬಹುದು. ಆದುದರಿಂದ ಇಂದು ಒಂದು ತೀರ್ಮಾನಮಾಡೋಣ. ನಾವು ಆಧ್ಯಾತ್ಮಿಕ ಪ್ರತಿಪಾದನೆಯನ್ನಷ್ಟೇ ಮಾಡುತ್ತೇವೆ. ಆದರೆ proprietorship ಹೋಗಲಿಕ್ಕೇಬೇಕು. Large scale farming ಹಾಗೂ capitalist farming ಮುಂತಾದುವುಗಳು ಇರುವುದರಿಂದ ನಮ್ಮ ವ್ಯವಸಾಯದ ಥೋರಣೆ ಏನು ಎಂದು ನಮಗೆ ಅರ್ಥವಾಗುವುದು ಕಠಿಣವಾಗಿದೆ. ಕ್ರಮೇಣ ಏನೂ ಕಷ್ಟವಾಗುವುದಿಲ್ಲ. ನಾವು ಮನಸ್ಸು ಗಟ್ಟಿ ಕೆಲಸಮಾಡಬೇಕು.

Sri S. D. KOTHAVALE (Chikodi).—Is co-operative farming the same thing as capitalist farming ?

Sri H. M. CHANNABASAPPA.—It can never be deemed as a capitalist farming. If co-operative farming is to be there with the proprietorship attached to the man and the institution ownership is there, then that is one of the farms which can come within the

((SRI H. M. CHANNABASAPPA)
orbit of peasant proprietorship. It is one of the branches.

Sri S. D. KOTHAVALE.—Is it adjunct to capitalist farming?

Sri H. M. CHANNABASAPPA.—It is not. How can it be? On the very face of it, it cannot be. When I come to co-operative farming, I will tell the Hon'ble member my views about it. ನಮ್ಮ ಮೈಸೂರು ಸಂಸ್ಥಾನದಲ್ಲಿಯ ಭೂ ಸಮಸ್ಯೆಯನ್ನು ಬಿಡಿಸುವುದಕ್ಕೆ ಮುಂದಿನ ಮಾರ್ಗ ಯಾವುದು ಎಂಬುದನ್ನು ಆಲೋಚನೆಮಾಡಬೇಕು. ಉಳುವವನೇ ಭೂಮಿಯ ಒಡೆಯನಾಗಬೇಕು. ಏಕೆಂದರೆ ಉಳುವವನಿಗೆ ಭೂಮಿ ನೇರವಾಗಿ ಸಂಬಂಧಪಟ್ಟುದಾಗಿರುತ್ತದೆ. ಮತ್ತು ಕಾರ್ಖಾನೆಗಳಲ್ಲಿ ಅದರಲ್ಲೂ ಅಗ್ರಿಕಲ್ಚರಲ್ ಇಂಡಸ್ಟ್ರೀಸ್ ಏನಿದೆ ಹಳ್ಳಿಯಿಂದ ಬರತಕ್ಕದ್ದು ಒಂದು ಮೆಟೀರಿಯಲ್ ಏನಿವೆ ಅದನ್ನು ಕಾರ್ಖಾನೆಗಳನ್ನು ಇಟ್ಟುಕೊಂಡಿರತಕ್ಕ ಜನ, ಕಾರ್ಖಾನೆಗಳಲ್ಲಿರತಕ್ಕ ಕೂಲಿಗಾರರು, ಅವರವರು ನೇರವಾಗಿ ಇದಕ್ಕೆ ಸಂಬಂಧಪಡುತ್ತಾರೆ. ಇನ್ನು ಇಡಿಯ ಸಂಸ್ಥಾನದಲ್ಲಿರತಕ್ಕ ಎಲ್ಲಾ ಜನವು ಅನ್ನ ಬಟ್ಟೆಗೋಸ್ಕರವಾಗಿ ಇದನ್ನು ಅವಲಂಬಿಸಿದ್ದಾರೆ. ನೇರವಾಗಿ ಬರತಕ್ಕವರು ಈ ಮೂರು ಕ್ಲಾಸಿಗೂ ಸೇರಿದವರು. ಈಗ ನಮ್ಮ ದೇಶದಲ್ಲಿರುವ ಸಮಸ್ಯೆ ಏನೆಂದರೆ ಒಂದನೆಯದು ಭೂಮಿಯ ಉತ್ಪತ್ತಿಯನ್ನು ಹೆಚ್ಚಿಸುವುದು ಮೂಲಗುರಿ. ಎರಡನೆಯ ಗುರಿ ಜನಗಳಿಗೆ ಕೆಲಸಕಾರ್ಯಗಳನ್ನು ದೊರಕಿಸುವುದು, ಅದನ್ನು ನಿರ್ಮಾಣಮಾಡತಕ್ಕದ್ದು. ಮೂರನೆಯದು ಬಹಳ ಮುಖ್ಯವಾದುದು, ಸೋಷಿಯಲ್ ಜಸ್ಟಿಸ್ ಆಗಬೇಕು. ಈ ಮೂರು ವಿಷಯಗಳು, ಅಂದರೆ Social justice, equal opportunity to all for employment and production ಈ ಮೂರು ವಿಷಯಗಳ ಸಾಧನೆಗಾಗಿ ಉತ್ಪಾದನೆ ಮಹತ್ವವಾದಂಥ ಪ್ರಶ್ನೆ. ಇದಕ್ಕೆ ಮುಖ್ಯವಾಗಿ ಗಮನ ಕೊಡಬೇಕು ಎಂದು ಪಂಡಿತ ನೆಹರೂ ಅವರೇ in season and out of season ಒತ್ತಿ ಒತ್ತಿ ಹೇಳುತ್ತಿದ್ದಾರೆ. ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡರೂ ಉತ್ಪಾದನೆಗೆ ಒಂದಲ್ಲ ಒಂದು ರೀತಿ ಅಡ್ಡಿ ಬರುತ್ತದೆ. ಅಂತಹ ಕಾರ್ಯಕ್ರಮದ ಬಗ್ಗೆ ಬಹಳ ಎಚ್ಚರಿಕೆಯಿಂದ ಹೋಗಬೇಕು. ಆದ್ದರಿಂದ ನಾವು ಈ ವಿಧಾನಗಳನ್ನು ವ್ಯವಸ್ಥೆಮಾಡುವಾಗ ಉತ್ಪಾದನೆಯ ಕಡೆಗೆ ಬಹಳ ಮಹತ್ವವಾದಂಥ ದೃಷ್ಟಿಯನ್ನಿಡಬೇಕು. ಎರಡನೆಯದು ಜನರೆಲ್ಲರಿಗೂ ಕೆಲಸಕಾರ್ಯಗಳು ದೊರೆಯಬೇಕು. ಇವೆರಡು ದೇಶದಲ್ಲಿರತಕ್ಕ ಭೂ ಸಮಸ್ಯೆ ಏನು ಅಂದರೆ ಆಹಾರ ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಾ ಇಲ್ಲ. ಪರದೇಶಕ್ಕೆ ಕಳುಹಿಸತಕ್ಕ ಪ್ರಮಾಣದಲ್ಲಿ ಬೆಳೆಯುತ್ತಾ ಇಲ್ಲ. ಆದ್ದರಿಂದ ಈ ಎರಡೂ ತೊಂದರೆಗಳಾಗುತ್ತಿವೆ. ಎರಡನೆಯದು ಭೂಮಿಯನ್ನು ಅವಲಂಬಿಸಿ ಕೋಟಿಗಟ್ಟಲೆಯ ಜನ ಕೆಲಸ ಮಾಡುತ್ತಿದ್ದಾರೆ. ಅದರ ಮೇಲೆ ಒತ್ತಡ ಎಷ್ಟು ಪ್ರಮಾಣದಲ್ಲಿರಬೇಕೋ ಆ ಪ್ರಮಾಣಕ್ಕಿಂತ ಬಹಳ ವಿಶೇಷವಾದ ರೀತಿಯಲ್ಲಿ ಬೆಳೆದುಹೋಗಿದೆ. ಪ್ರಜಾ ಸಂಖ್ಯೆ ಬಹಳ ಹೆಚ್ಚಿನ ಪ್ರಮಾಣದಲ್ಲಿ ಬೆಳೆದುಹೋಗಿದೆ. ಆದ್ದರಿಂದ ಎಲ್ಲಾ ಜನಗಳಿಗೂ ವ್ಯವಸಾಯ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆಮಾಡಬೇಕು ಈಗ ಭೂಮಿಗೆ ಸಂಬಂಧಪಟ್ಟ ರಿಪೋರ್ಟ್‌ಗಳು ಬೇಕಾದಷ್ಟಿವೆ. ಫ್ಯಾಮಿನ್ ಕಮಿಷನ್ ರಿಪೋರ್ಟ್, ಕಾಂಗ್ರೆಸ್ ಅಗ್ರೇರಿಯನ್ ರಿಫಾರಮ್ಸ್ ಕಮಿಟಿ ರಿಪೋರ್ಟ್ ಮತ್ತು ಪ್ಲಾನಿಂಗ್ ಕಮಿಷನ್ ರಿಪೋರ್ಟ್ ಹೀಗೆ ಭೂಮಿಗೆ ಸಂಬಂಧಪಟ್ಟ ಯಾವ ರಿಪೋರ್ಟನ್ನು ತೆಗೆದುಕೊಂಡರೂ ಭೂಮಿಯ ಒತ್ತಡವನ್ನು ಕಡಮೆ ಮಾಡಬೇಕೆಂದು ಆ ಸಮಿತಿಯವರು ಒತ್ತಾಯ ಮಾಡಿದ್ದಾರೆಯೇ ವಿನಾ ಭೂಮಿಯ ಕಡೆಗೆ ಹೆಚ್ಚು ಜನರನ್ನು ಹೊರಿಸಬೇಕೆಂದು ಯಾರೂ ಪ್ರತಿಪಾದನೆ ಮಾಡಿರುವುದು ನನಗೆ ಕಾಣಬರಲಿಲ್ಲ. ಕಾಂಗ್ರೆಸ್ ಅಗ್ರೇರಿಯನ್ ರಿಫಾರಮ್ಸ್ ಕಮಿಟಿಯವರು ಒಂದು ವಿಷಯವನ್ನು ಹೇಳಿದ್ದಾರೆ. ಅದನ್ನು ಓದಿದರೆ ನಮಗೆ ಗೊತ್ತಾಗುತ್ತದೆ. ಅದರಲ್ಲಿ ಹೇಳಿರುವುದು ಇಷ್ಟೇ; ಹಿಂದೆ ಇದ್ದ ಅಗ್ರಿಕಲ್ಚರಲ್ ಆಕ್ಟನ್ನು ಬದಲಾವಣೆ ಮಾಡಿದಾಕ್ಷಣಕ್ಕೆ ಭೂ ಸಮಸ್ಯೆಯನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಈ ಸಮಸ್ಯೆ ಬಗೆಹರಿಯಬೇಕಾದರೆ ಪ್ಯಾಟರನ್ ಬದಲಾವಣೆ ಮಾಡಿಬೇಕು. ದೇಶದಲ್ಲಿರತಕ್ಕ ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಜನರಿಗೆ ಎಷ್ಟೆಷ್ಟು ಭೂಮಿಯಿದೆ, ಎಷ್ಟೆಷ್ಟು ಜನರು ವ್ಯವಸಾಯಮಾಡಬಹುದು ಎಂಬುದಕ್ಕೆ ಸರ್ಕಾರದವರು ಪೂರ್ಣಗಮನಕೊಡಬೇಕು. ಇವೊತ್ತು ನಮ್ಮ ದೇಶದಲ್ಲಿ ಲಾಯಕ್ಕಾಗಿರುವ ಭೂಮಿ ಎಷ್ಟಿದೆ, ಎಂಬುದನ್ನು ರೆಕ್ಕೆ ಹಾಕಿಕೊಳ್ಳಬೇಕು. ಒಂದು standard of livingಗೆ ಸರಿಯಾಗಿ ನಮ್ಮ ಒಂದು ಸಂಸಾರಕ್ಕೆ ಕನಿಷ್ಠ ಮತ್ತು ಪರಮಾವಧಿಯಾಗಿರತಕ್ಕ ಭೂಮಿ ಎಷ್ಟಿರಬೇಕು, ಆ ಭೂಮಿಯಮೇಲೆ ಎಷ್ಟು ಸಂಸಾರಗಳನ್ನು ನಾವು ವ್ಯವಸ್ಥೆಮಾಡಬಹುದು, ಅವರ ಜೀವನಕ್ಕೆ ಕೊರತೆ ಇಲ್ಲವೆ, ದೇಶದ ಹಿತದೃಷ್ಟಿಗೆ ಕೊರತೆಯಾಗದಂತೆ ಯಾವರೀತಿ ರೆಕ್ಕಹಾಕಿದರೆ ಎಕಾನಮಿಸ್ಟ್ಸ್‌ನ ಮತ್ತು ಅನುಭವಸ್ಥರು ಈ ಭೂಮಿಯ ಒತ್ತಡದ ಪ್ರಮಾಣಕ್ಕೆ ಹೆಚ್ಚಿಗೆ ಹೋಗಕೂಡದು ಎಂದು ಹೇಳಿರುವುದನ್ನು ನಾವು ಮರೆಯಲು ಸಾಧ್ಯ ಎಂಬುದನ್ನು ನೋಡಬೇಕು

Sri V. P. DEENADAYALU NAIDU (Cubbonpet).—I do not find that particular information in the report, but now that our friend has made a study of it, I would like to know whether he will be in a position to enlighten the House as to what is the quantum that is available by resumption and how many families would be benefited by this legislation.

Sri H. M. CHANNABASAPPA.—I shall certainly bear this in mind when I come to deal with the report item by item. ಅದು ವಾಸ್ತವ. ಅವರು ಕೇಳತಕ್ಕದ್ದು ನರಿ. ಈ ರಿಪೋರ್ಟನ್ನು ಜಾರಿಗೆ ತರುವುದರಿಂದ ಎಷ್ಟು ಜನಗಳನ್ನು ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಈ ಸಭೆಯ ಗಮನಕ್ಕೆ ನಿನ್ನೆಯೇ ಸರ್ಕಾರದವರು ಸೂಚನೆಮಾಡುತ್ತಾರೆಂದು ನಾನು ನಿರೀಕ್ಷಣೆ ಮಾಡಿದ್ದೆ. ಅವರು ಏನೂ ಸೂಚನೆಮಾಡದೇ ಇರುವುದರಿಂದ ನನಗೆ ಸೂಚನೆಮಾಡುವುದಕ್ಕೆ ಸಾಧ್ಯವಾದರೆ, ಆ ಪ್ರಶ್ನೆ ಬಂದಾಗ ಹೇಳುತ್ತೇನೆ. ಈಗ ಭೂಮಿಯ ಮೇಲೆ ಯಾವ ಯಾವ ಸೆಕ್ಟರಿನಲ್ಲಿ ಎಷ್ಟೆಷ್ಟು ಜನರನ್ನು ವ್ಯವಸ್ಥೆಮಾಡಬಹುದು ಎನ್ನುವುದನ್ನು ನೋಡಬೇಕು. ಪ್ರಜಾಸಂಖ್ಯೆ ಹೀಗೆಯೇ ಇರುವುದಿಲ್ಲ. ಇನ್ನೈವತ್ತು ವರ್ಷಗಳೊಳಗೆ ಎಷ್ಟು ಬೆಳೆಯುತ್ತದೆ ಎನ್ನುವುದನ್ನು ಹಿಂದಿನ ಅನುಭವದಿಂದ ತಿಳಿದುಕೊಳ್ಳಬಹುದು.

ಯಾವ ಭೂಸ್ವಾಮ್ಯವಾಗಲಿ, ಭೂಮಿಯ ಅನುಕೂಲ ತೆಗಳಲ್ಲಿ ಇನ್ನೈವತ್ತು ವರ್ಷಗಳಲ್ಲಿ ಇದು ಹೀಗೆಯೇ ಇರುತ್ತದೆಂದು ಯಾರೂ ಯೋಚನೆಮಾಡಬೇಕಾಗಿಲ್ಲ. ನಮ್ಮ ದೃಷ್ಟಿ ಎಲ್ಲಿಯವರೆಗೆ ಹೋಗಬಹುದೋ ಅಲ್ಲಿಯವರೆಗೂ ಓಡಿಸಿ, ಯೋಚನೆಮಾಡಿ ವ್ಯವಸ್ಥೆಮಾಡುವುದು ನಮ್ಮ ಕರ್ತವ್ಯ. ಈಗ ನಮ್ಮ ದೇಶದಲ್ಲಿ ಭೂಮಿ ಎಷ್ಟಿದೆ, ಜನ ಎಷ್ಟಿದ್ದಾರೆ, ಭೂಮಿಯನ್ನೇ ಅವಲಂಬಿಸಿರತಕ್ಕ ಜನ ಎಷ್ಟಿದ್ದಾರೆಂಬುದನ್ನು ನೋಡಬೇಕು. ಈ ಪ್ರಶ್ನೆಯನ್ನು ಬಿಡಿಸುವಾಗ ಭೂಮಾಲೀಕರು ಎಂದು ಒಂದು ಗುಂಪು ಬರುತ್ತದೆ. ಒಂದು ಕಡೆ ಗೇಣಿದಾರರು, ಮತ್ತೊಂದು ಕಡೆ ಕೂಲೀಕಾರರು. ಬಹಳಮಟ್ಟಿಗೆ ಇವರು ತೊಂದರೆ ಅನುಭವಿಸಿದ್ದಾರೆ. ಬ್ರಿಟಿಷರ ಸಾಮ್ರಾಜ್ಯಷಾಹೀ ಸರ್ಕಾರ ಭರತಖಂಡದಲ್ಲಿ ತಮ್ಮ ಅನುಕೂಲಕ್ಕೆ ಮತ್ತು ಪ್ರಾಬಲ್ಯಕ್ಕೆ ಅನುಕೂಲವಾದಂತಹ ಜಮೀನು ಪದ್ಧತಿಯನ್ನು ತಂದುದರಿಂದ, ದೇಶದಲ್ಲಿ ಕಷ್ಟಪರಂಪರೆಗಳು ಬಂದುವು. ಬಂಗಾಳದಲ್ಲಿ, ಒರಿಸ್ಸಾದಲ್ಲಿ, ಬಿಹಾರದಲ್ಲಿ ಮತ್ತು ಉತ್ತರ ಪ್ರದೇಶದಲ್ಲಿ ಹಾಗೂ ಮದ್ರಾಸ್, ಬೊಂಬಾಯಿ ಇತ್ಯಾದಿ ಕಡೆಗಳಲ್ಲಿ ಹಲವು ಪ್ರಮಾಣದಲ್ಲಿ ಈ ಜಮೀರ್ದಾರೀ ಪದ್ಧತಿ ಒಂದಲ್ಲ, ಒಂದು ರೀತಿಯಲ್ಲಿ ಜಾರಿಗೆ ಬಂದಿತ್ತು. ಒಟ್ಟು ಭರತಖಂಡದ ವಿಸ್ತೀರ್ಣದಲ್ಲಿ ಶೇಕಡ 65ರಷ್ಟು ಜಮೀನು ಈ ಜಮೀರ್ದಾರ್ ಪದ್ಧತಿಯಲ್ಲಿ ಸೇರಿಹೋಯಿತು. ಆಗ ಯಾರು ಯಾರು ಕಲೆಕ್ಟರ್ ಆಗಿದ್ದರೋ ಅವರೇ ಸರ್ಕಾರಕ್ಕೆ ಹಣವನ್ನು ವಸೂಲು ಮಾಡಿಕೊಡತಕ್ಕ agency ಆಗಿದ್ದರು. ಅವರೆಲ್ಲರೂ ಜಮೀರ್ದಾರರು ಎಂಬ ಒಂದು ದೊಡ್ಡ ಭಾವನೆ ಕೊಟ್ಟು ಅವರ ಮುಖೇನ ಕಂದಾಯ ವಸೂಲಿ ಸುಲಭ ರೀತಿಯಲ್ಲಾಗುವಂತೆ ಒಂದು ವ್ಯವಸ್ಥೆಮಾಡಿದರು. ನಮ್ಮಲ್ಲಿ ಕೃಷ್ಣರಾಜ ಸಾಗರದ ಹತ್ತಿರ ಎರಡು ಎಕರೆ ತರೀ ಜಮೀನು ಸಾಗುಮಾಡುವ ಬಡಪಾಯಿಯನ್ನು ಆಬ್‌ಸೆಂಟಿ ಲ್ಯಾಂಡ್ ಲಾರ್ಡ್ ಎಂದು ಹೇಳುತ್ತಾರೆ. ಲ್ಯಾಂಡ್ ಲಾರ್ಡ್ ಎಂದರೆ ಲ್ಯಾಂಡಿನ ಮೇಲೆ ಲಾರ್ಡ್ ಅಲ್ಲ. ಬ್ರಿಟಿಷ್ ಸಾಮ್ರಾಜ್ಯ ಷಾಹಿಯಲ್ಲಿ ಯಾವನು ಜಮೀರ್ದಾರ್ ಎಂದು ಎನಿಸಿಕೊಂಡಿದ್ದಾನೋ ಅವನೇ ಜಮೀರ್ದಾರ್. ಅವನ ಸ್ಥಿತಿಗತಿಗಳು ಹಾಗೆಯೇ ಮುಂದುವರಿದುಕೊಂಡು ಬಂದುವು. ಒಬ್ಬೊಬ್ಬ ಜಮೀರ್ದಾರ್ ರಾಜ ಮಹಾರಾಜರುಗಳಿಗಿಂತಲೂ ವಿಸ್ತಾರವಾಗಿ ಜಮೀನನ್ನು ತನ್ನ ವಶದಲ್ಲಿಟ್ಟುಕೊಂಡು ಸರ್ಕಾರಕ್ಕೆ ನಿರ್ದಿಷ್ಟವಾಗಿ ಕಂದಾಯ ತೆತ್ತು ನೇರವಾಗಿ ಭೂಮಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಮಾಡುತ್ತಿದ್ದನು. ಅವನಿಗೂ ಹೊಲ ಉಳುವವನಿಗೂ ನೇರವಾಗಿ ಸಂಬಂಧ ಕೇವಲ ಜೆನೆಂಟ್ ಮತ್ತು ಭೂಮಿ ಮಾಲೀಕನಿಗೂ ಇದ್ದ ಸ್ಥಿತಿಗೆ ಬಂತು. ಒಂದು ಕಡೆ ಜಮೀರ್ದಾರರು ದೊಡ್ಡ ದೊಡ್ಡ ಸ್ಥಾನಮಾನಗಳನ್ನು ಹೊಂದಿ ದೇಶದಲ್ಲಿ ಪ್ರಾಮುಖ್ಯವನ್ನು ಪಡೆದು ಯಥೇಚ್ಛವಾಗಿ ಹಣವನ್ನು ಪಡೆದು ಸುಖವಾಗಿದ್ದಾರೆ, ಒಂದು ಕಡೆ ರೈತಾಪಿ ಜನ ಬಹಳ ಅಧೋಗತಿ ಹೊಂದಿದ್ದಾರೆಂದು ಆಗಾಗ ರೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಹೇಳಿದ್ದೇನೆ. Zamindar is growing in wealth, and the rural man is deteriorating. ಈ ವಿಚಾರ ಅವರ ಗಮನಕ್ಕೆ ಬಂದರೂ, ಕೂಡ ಒಂದು ಸಿಸ್ಟಮ್ ಇಂಟ್ರಡ್ಯೂಸ್ ಮಾಡಿದ ಮೇಲೆ ಅದು ಸರಿಯಲ್ಲ ಎಂದು ಮನಸ್ಸಿಗೆ ಕಂಡು ಬಂದರೂ, ಪ್ರೆಸ್ಟಿಜ್ ಮೇಲೆ ಅದನ್ನು ತೆಗೆಯುವುದಕ್ಕೆ ಮನಸ್ಸು ಮಾಡಿಲ್ಲ. ಶೇಕಡಾ 95 ರಷ್ಟು ಜನರ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಕ್ಕೆ ಆಗಿಂದಾಗ್ಗೆ ಜೆನೆನ್ಸಿ ಆಕ್ಟನ್ನು 66ವರ್ಷಗಳಿಂದ ಸ್ವಲ್ಪ ಬದಲಾವಣೆ ಮಾಡಿಕೊಂಡು ಬಂದರು. ಆಗ್ಯೆ ಭೂಮಾಲಿಕ, ಜಮೀನ್ದಾರನಿಗೂ ಹೊಲವನ್ನು ಉಳತಕ್ಕಂಥ ಹವನಿಗೂ ಮಧ್ಯೆ 72 ಜನ ಎಕ್ಸ್‌ಪ್ಲಾಯಿಟರ್ಸ್ ಇದ್ದರು ಆ 72 ಏಜೆನ್ಸಿಗಳು ಭೂಮಿಯಲ್ಲಿ ಉತ್ಪಾದನೆ ಮಾಡುವುದನ್ನು ಹಂಚಿಕೊಳ್ಳುತ್ತಿದ್ದರು. ನಾನು ಹೇಳುತ್ತಿರುವುದು ಸ್ಯೆಮನ್ ಕಮಿಷನ್ ಅಭಿಪ್ರಾಯ. ಜಮೀನ್ದಾರನಿಗೂ ಹೊಲವನ್ನು ಉಳತಕ್ಕಂಥವನಿಗೂ ಮಧ್ಯದಲ್ಲಿ 'there were 72 intermediaries who exploited the poor man' ಎಂದು ಹೇಳಿದ್ದಾರೆ. ಆ ಜಮೀನ್ದಾರನಿಗೂ ನಾನು ಹೇಳುವ ಜಮೀನ್ದಾರನಿಗೂ ಅಂತರ ಬಹಳ ಇದೆ. ಆದ್ದರಿಂದ ನಾವು ಈ ಸಭೆಯಲ್ಲಿ ಚರ್ಚೆಮಾಡುವಾಗ ಜಮೀನ್ದಾರ ಎಂದುಕೊಂಡರೆ ಆ ಜಮೀನ್ದಾರನನ್ನು ದೃಷ್ಟಿಯಲ್ಲಿ ಇಟ್ಟುಕೊಳ್ಳಬಾರದು ಎಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಅಂಥವರು ಬಂಗಾಳ, ಬಿಹಾರ, ಉತ್ತರ ಪ್ರದೇಶಗಳಲ್ಲಿ ಇದ್ದಾರೆ. ಕೆಲವಾರು ವರ್ಷಗಳು ಕಳೆದ ಮೇಲೆ ಅದರ ಪ್ರಕ್ರಿಯೆ ಮುದರಾನು ಮತ್ತು ಬೊಂಬಾಯಿನಲ್ಲಿ ಆಯಿತು. ನಮ್ಮಲ್ಲಿ ರೈಯತ್‌ವಾರಿ ಇದೆ. ಮನುಷ್ಯನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಅವನಿಗೆ ಎಷ್ಟು ಭೂಮಿ ಇದೆಯೋ ಅದರ ಮೇಲೆ ನಿರ್ಧಾರ ಮಾಡುವುದನ್ನು ಇಂಗ್ಲೀಷಿನವರು ಡೆವಲಪ್ ಮಾಡಿಕೊಂಡು ಬಂದರು. ರೈಯತ್‌ವಾರಿ ಮತ್ತು ಹೆಚ್ಚು ಭೂಮಿಯನ್ನು ಕೊಂಡುಕೊಂಡ ದೊಡ್ಡ ಲ್ಯಾಂಡ್ ಲ್ಯಾರ್ಡ್ಸ್ ಹೆಚ್ಚಾಗಿ ಇದ್ದ ಪಕ್ಕದ ಮದ್ರಾಸ್, ಹೈದರಾಬಾದು ಮತ್ತು ಬೊಂಬಾಯಿ ಪ್ರಾಂತಗಳಲ್ಲಿಯೂ, ಇದರ ಪ್ರತಿಕ್ರಿಯೆ ಉಂಟಾಯಿತು.

ಶ್ರೀ ಎ. ಶ್ರೀನಿವಾಸಶೆಟ್ಟಿ (ಕುಂದಾಪುರ).— ರಿಪೋರ್ಟ್ ವಿಷಯ ಏನೂ ಡಿಸ್‌ಕಷನ್ ಬೇಡವೇ ?

Sri H. M. CHANNABASAPPA.—I am giving the background against which you have to appreciate the report. I will try to meet and convince you on any point which I raise in this House but I have no objection for interjections I shall be happy to meet the points. ನಾನು ಹೇಳಿದ್ದು ಲ್ಯಾಂಡ್ ಲಾರ್ಡ್ಸ್, ಜಮೀನ್ದಾರ್ ಎಂದುಕೊಂಡರೆ ನಮ್ಮ ದೇಶದಲ್ಲಿ ಭೂತ್ವಾಮ್ಯ ಪದ್ಧತಿಗೆ ಸಂಬಂಧಪಟ್ಟ ಹಾಗೆ ಇರುವ ಜಮೀನ್ದಾರರ ವಿಷಯವಾಗಿ ಪ್ಲಾನಿಂಗ್ ಕಮಿಷನ್ ಅವರು ಏನು ಶಿಫಾರಸ್ಸು ಮಾಡಿದ್ದಾರೆ ಅದು ನಮ್ಮ ಮುಂದೆ ಬರುತ್ತದೆ. ಬಹುತೇಕ ಅವರು ಮಾಡಿರತಕ್ಕದ್ದು ತಪ್ಪಲ್ಲ. ಏತಕ್ಕೆಂದರೆ ಅವರ ದೃಷ್ಟಿಯಲ್ಲಿ ಜಮೀನ್ದಾರ ಎನಿಸಿಕೊಳ್ಳುವ ಮನುಷ್ಯ 72 ಜನರು ಅನುಕೂಲ ಪಡೆದು ಕೊಂಡಮೇಲೆ ತಾನೂ ಅನುಕೂಲ ಪಡೆದುಕೊಳ್ಳುವನು. ಇವನನ್ನೇ ಅವರು ದೃಷ್ಟಿಯಲ್ಲಿ ಮುಖ್ಯವಾಗಿಟ್ಟುಕೊಂಡಿದ್ದಾರೆ. ಒಳ್ಳೆಯ ರೈತನನ್ನು ಶೋಷಣೆ ಮಾಡುವವರನ್ನು ದೃಷ್ಟಿಯಲ್ಲಿಟ್ಟುಕೊಂಡು ಬಹುವಾಗಿ ಅಭಿಪ್ರಾಯ ಕೊಟ್ಟಿದ್ದು ಅವರ ತಪ್ಪಲ್ಲ. ಏತಕ್ಕೆ ಎಂದರೆ ಲ್ಯಾಂಡ್ ಪರಿಸ್ಥಿತಿ ಹೀಗಿದೆ. ಯಾವ ಭೂಮಿಯಲ್ಲಿ ಉತ್ಪಾದನೆ ಆಗಬೇಕಾದರೂ ಇರಿಗೇಷನ್ ಫ್ಯಾಕ್ಟರ್‌ಗಳಾಗಬೇಕು. ಭೂಮಿಯು ಬಗ್ಗೆ ಪ್ರೇಮ ವಿರಬೇಕು. ಸರ್ಕಾರಕ್ಕೂ ಭೂಮಿಗೂ ಸಂಬಂಧ ತಪ್ಪಿಹೋಗಿರುವುದರಿಂದ ಮುತುವರ್ಜಿಯುಳ್ಳ ಜನ ಹೆಚ್ಚಿನ ಮಟ್ಟದಲ್ಲಿ ಉತ್ಪನ್ನ ಮಾಡುವುದಕ್ಕೆ ವ್ಯವಸಾಯ ಮಾಡುವುದಕ್ಕೆ ಸರ್ಕಾರ ಸಹಾಯಕ್ಕೆ

(SRI H. M. CHANNABASAPPA)

ಬರುವುದಕ್ಕೆ ಆಗಿಲ್ಲ. ರೈತರು ಕೋರ್ಟು ಕಛೇರಿಗಳಿಗೆ ಹೋಗಿ ಪಾಪರ್ ಆದರು. ಈ ದೃಷ್ಟಿಯಿಂದ ರೈತರಿಗೆ ಹಕ್ಕು ಇರಬೇಕು. ಜಮೀನ್ದಾರರಿಗೆ ಹಕ್ಕು ಇರಬೇಕು. ಈ ದೃಷ್ಟಿಯಿಂದ ವ್ಯವಸಾಯದ ವ್ಯವಸ್ಥೆ ಮಾಡಬೇಕು ಎನ್ನುವ ಸ್ಕೀಮನ್ನು ಯೋಜನೆ ಮಾಡಬೇಕು. I congratulate the Planning Commission on that point. ಒಂದು ಕಡೆ ಪ್ರಾರಂಭದಲ್ಲಿ ಹೇಳಿದ್ದಾರೆ. ಭೂಸ್ವಾಮ್ಯ ಪದ್ಧತಿಯಲ್ಲಿ ಹೆಜ್ಜೆ ಹೆಜ್ಜೆಗೂ ಬದಲಾವಣೆ ಇದೆ, ಜಿಲ್ಲೆ ಜಿಲ್ಲೆಗೂ ಪ್ರಾಂತ ಪ್ರಾಂತಕ್ಕೂ ಬದಲಾವಣೆ ಇದೆ, ಅವರು ಭೂಸ್ವಾಮ್ಯ ವಿಚಾರದಲ್ಲಿ broad policy ದೃಷ್ಟಿಯಲ್ಲಿಟ್ಟುಕೊಂಡು ಯಾವ ಯಾವ ಪ್ರಾಂತದಲ್ಲಿ ಪರಿಸ್ಥಿತಿ ಏನಿದೆ, ಭೂಮಿ ಎಷ್ಟಿನೆ ಜನಗಳ ಸ್ಥಿತಿಗತಿಗಳು ಹೇಗಿವೆ, ಚರಿತ್ರೆ ಏನಿದೆ ಎನ್ನುವುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಆಯಾ ಸ್ಥಳಗಳಿಗೆ ಅನುಗುಣವಾಗಿ ವ್ಯವಸ್ಥಿತವಾದ ಯೋಜನೆ ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿದ್ದಾರೆ. ಅದಕ್ಕೊಸ್ಕರವಾಗಿ ನಾನು ಅವರನ್ನು ಅಭಿನಂದನೆ ಮಾಡುವುದು ನನ್ನ ಕರ್ತವ್ಯ. ಈಗ ನಾವು ಮೈಸೂರು ಸಂಸ್ಥಾನದಲ್ಲಿ ಭೂಸ್ವಾಮ್ಯದ ಪ್ರಶ್ನೆಯನ್ನು ಈ ರೀತಿ ಪರಿಶೀಲನೆ ಮಾಡುವಾಗ ಜಮೀನ್ದಾರ, ರೈತ ಮತ್ತು ಆ ಪದ್ಧತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ಲಾನಿಂಗ್ ಕಮಿಷನ್ ಏನು ಹೇಳಿವ್ವಾರೆ ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಬೇಕು. ಜೊತೆಗೆ ಇಲ್ಲಿ ರೈಯತ್‌ವಾರಿ ಪದ್ಧತಿ ಇದೆ. ನಮ್ಮಲ್ಲಿ ಭೂಸುಧಾರಣೆ ಜಾರಿಗೆ ತರುವಾಗ ಪಾಶ್ಚಿಮಾತ್ಯ ದೇಶದಲ್ಲಿ ಯಾವ ರೀತಿ ಈ ಸಮಸ್ಯೆಯನ್ನು ಬಗೆಹರಿಸಿದ್ದಾರೆ ಎನ್ನುವುದನ್ನು ಸ್ವಲ್ಪ ಮಟ್ಟಿಗೆ ನಾವು ದೃಷ್ಟಿಯಲ್ಲಿ ಇಟ್ಟುಕೊಂಡರೆ ಬಹಳ ಮಟ್ಟಿಗೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಹಾಯವಾಗುತ್ತದೆ. ಈ ಕಮಿಟಿ ರಿಪೋರ್ಟನ್ನು ಪರಿಶೀಲನೆ ಮಾಡುವಾಗ ಅವರು ಮಾಡಿರುವುದರಲ್ಲಿ ಏನು ವ್ಯತ್ಯಾಸ ವಿದೆ, ನಾವು ಯಾವಮಾರ್ಗದಲ್ಲಿ ಹೋಗಬೇಕು ಎನ್ನುವ ವಿಚಾರವನ್ನು ತಿಳಿಸುತ್ತೇನೆ. ಈಗ ನಮ್ಮ ಸಂಸ್ಥಾನದಲ್ಲಿ ಕೆಲವು ಪ್ರಾಂತಗಳು ವಿಲೀನವಾಗಿದೆ. ಬೊಂಬಾಯಿ, ಹೈದರಾಬಾದ್, ಮದ್ರಾಸು, ಹಳೆಯ ಮೈಸೂರು ಮತ್ತು ಕೊಡಗು, ಈ ಐದು ಪ್ರಾಂತಗಳು ಸೇರಿ ಹೊಸ ರಾಜ್ಯವಾಗಿದೆ. ಹೊಸ ರಾಜ್ಯದ ನಾನಾ ಭಾಗಗಳಲ್ಲಿ ನಾನಾ ತರಹದ ಶಾಸನಗಳಿವೆ. ಮೊನ್ನೆಯ ದಿವಸ ಮಾತನಾಡುವಾಗ ಹೈದ್ರಾಬಾದ್, ಬೊಂಬಾಯಿ ಸ್ನೇಹಿತರು ಈ ವಿಷಯದಲ್ಲಿ ಬಹಳ ವೇಗದಲ್ಲಿ ಹೋಗಬೇಕು; ಹೋಗದಿದ್ದರೆ ಬಡವರಿಗೆ ಅನನುಕೂಲವಾಗುತ್ತದೆ ಎಂದು ವಾದಿಸಿದರು. ಅವರಲ್ಲಿ ತಪ್ಪು ಇಲ್ಲ. ಏಕೆಂದರೆ ಮೊದಲೇ ನಾನು ಹೇಳಿದಂತೆ ಅಲ್ಲಿಯ ಸ್ಥಿತಿಗತಿಗಳು ಬಹಳ ಉಲ್ಬಣವಾಗಿವೆ. ಆದ್ದರಿಂದ ಅವರ ಮನಸ್ಸಿನ ಉದ್ವೇಗ ಏನು ಇದೆ ಅದು ಬೊಂಬಾಯಿ ಹೈದರಾಬಾದಿನಲ್ಲಿ ಅಷ್ಟೆ, ಮದ್ರಾಸಿನಲ್ಲಿ ಅದು ಕಾಣಿಲಿಲ್ಲ. ಬಹುಶಃ ಅವರಿಗೂ ಅನನುಕೂಲವಾಗಿದ್ದ ಪಕ್ಷದಲ್ಲಿ ಅವರು ಈ ವಿಚಾರ ಹೇಳುತ್ತಿದ್ದರು. ಶ್ರೀ ಶ್ರೀನಿವಾಸ ಶೆಟ್ಟಿಯವರು ಮಾತನಾಡುವಾಗ ಅಳಿಯ ಸಂತಾನದ ವಿಷಯವನ್ನು ಹೇಳಬಹುದು. ಅಂತೂ ಮೈಸೂರಿನಲ್ಲಿ ಇದ್ದಂಥ ಪರಿಸ್ಥಿತಿ ಮದ್ರಾಸಿನಲ್ಲಿ ಇಲ್ಲ. ಒಂದು ವಿಷಯಕ್ಕೆ ನಾನು ಸಂತೋಷ ಪಡುತ್ತೇನೆ. ಅದು ಏನೆಂದರೆ ಪ್ರಾಂತಗಳು ಎಲ್ಲವೂ ಸೇರುವಾಗ ಒಂದು ಮಹತ್ವದ ಸಂಗತಿ ನಡೆದಿದೆ. ಮೈಸೂರಿಗೆ ಬೇರೆ ಪ್ರಾಂತ್ಯಗಳ ಜನ ಸೇರುವಾಗ ಒಂದು ಮಹತ್ವದ ಸಂಗತಿ ನಡೆದಿದೆ. ಹಳೆಯ ಹಳೆಯ ಮೈಸೂರಿಗೆ ಬೇರೆ ಪ್ರಾಂತ್ಯಗಳ ಜನ ಸೇರುವಾಗ 95,50,000 ಜನಗಳು ಹೊಸ ಮೈಸೂರು ಸಂಸ್ಥಾನಕ್ಕೆ ಸೇರಿದವರು. ಹಳೆಯ ಮೈಸೂರು ಸಂಸ್ಥಾನದಲ್ಲಿ 98 ಲಕ್ಷ ಜನಗಳು. ಒಂದು ಸಂತೋಷದ ಸಂಗತಿ ಏನೆಂದರೆ ನಮಗೆ ಇದ್ದುದಕ್ಕಿಂತಲೂ ಮೂರು ಜನ ಲಕ್ಷ ಕಡಮೆ ಬಂದಿವ್ವಾರೆ. ಆದರೆ ವಿಸ್ತಾರವಾದ ಭೂಮಿ ತಂದಿದ್ವಾರೆ. ಮೈಸೂರು ಸಂಸ್ಥಾನದಲ್ಲಿ 88 ಲಕ್ಷ 30 ಸಾವಿರ ಎಕರೆ ಭೂಮಿ ವ್ಯವಸಾಯಕ್ಕೆ ಲಾಯಖ್ಖಾಗಿದೆ.

ಪರ್ ಕ್ಯಾಪಿಟಾ .9 ಎಕರೆ ಇತ್ತು. ಇವರು ಬರುವಾಗ ನಮಗೆ 194,90,000 ಎಕರೆ ಭೂಮಿಯನ್ನು ವ್ಯವಸಾಯಕ್ಕೆ ಲಾಯಖ್ಖಾದ ಜಮೀನನ್ನು ತಂದಿದ್ವಾರೆ. ಇದಕ್ಕಾಗಿ, ಇವರು ಪಾನ್ತವವಾಗಿಯೂ ಅಭಿನಂದನಾರ್ಹರು.

ಶ್ರೀ ಮಲ್ಲಪ್ಪಲಿಂಗಪ್ಪ (ಸಿರಮ್).—ನಾವು ಬಂದು ಸೇರಿಲ್ಲ, ಸ್ವಾಮಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವೇಳೆ ಮೈಸೂರು ತಮ್ಮಲ್ಲಿ ಸೇರಿತು ಅಂದುಕೊಳ್ಳೋಣ. ಹಳೆಯ ಮೈಸೂರಿನವರು ಹೊಸ ಮೈಸೂರಿಗೆ ಸೇರುವಾಗ ಅಂದರೆ 98·50 ಸಾವಿರ ಜನರು, ಕೇವಲ 80 ಲಕ್ಷ ಎಕರೆಗಳನ್ನು ತೆಗೆದುಕೊಂಡು ಹೋದರು. Let us not quarrel over it (*Laughter*) ಬಾಕಿಯವರು ನಮ್ಮಾರು ಒಬ್ಬ ಮನುಷ್ಯನಿಗೆ ಎರಡೂವರೆ ಎಕರೆಯಷ್ಟು ಹೆಚ್ಚು ಜಮೀನು ತೆಗೆದುಕೊಂಡು ಬಂದಿದ್ವಾರೆ. ಇದರಿಂದ ಪರ್ ಕ್ಯಾಪಿಟಾ 1·5ಕ್ಕೆ ಏರಿ, ನಮ್ಮ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತುಂಬ ಸಹಾಯವಾಗಿದೆ. ಹೀಗೆ ಅವರು ಬರುವಾಗ ಜಾಸ್ತಿ ಜಮೀನು ತರದಿದ್ದಲ್ಲಿ ಅಥವಾ ಕಡಮೆ ಭೂಮಿ ತಂದಿದ್ದರೆ, ನಮ್ಮ ಸಮಸ್ಯೆ ಇನ್ನೂ ಉಲ್ಬಣವಾಗುತಿತ್ತು. ಆದರೆ ಇದರಲ್ಲಿ ಒಂದು ವಿಷಯ. ಅವರು ಆ ಜಮೀನ್ನು ತರುವಾಗ, ದೊಡ್ಡ ದೊಡ್ಡ ಜಮೀನುದಾರರುಗಳನ್ನೂ ಕರೆದುಕೊಂಡು ಬಂದಿದ್ವಾರೆ. ನಮಗೆ ತೊಂದರೆ ಬಂದಿರುವುದು ಅದರಿಂದಲೇ.

AN HON'BLE MEMBER.—No, no.

Sri H. M. CHANNABASAPPA.—I am going to prove it to the hilt. When I make a statement, I stand by that and I adduce evidence for that. If the remedy is required in the case of Hyderabad, we will give it; Similarly, if the remedy is required by Madras or Bombay areas, we will give it.

Sri G. ANNA RAO.—But, the disease is there and the remedy will affect us.

Sri H. M. CHANNABASAPPA.—If it affects the Hon'ble Member it will affect us also, because we are all one now. It affects us with equal force and equal velocity. Therefore, let us not look to this problem on a regional basis.

ಈಗ ಈ ಮೂರು ಭಾಗಗಳ ಸ್ಥಿತಿಯನ್ನು ಸಮನ್ವಯ ಮಾಡತಕ್ಕಂಥ ಕೆಲಸ ಕಷ್ಟತಮವಾದ ಕೆಲಸ; ಇದು ಸುಲಭವಾದ ಕೆಲಸವಲ್ಲ. ಶ್ರೀ ಜತ್ತಿಯವರು ಮತ್ತು ಅವರ ಸಮಿತಿಯ ಸದಸ್ಯರೂ, ಇಷ್ಟು ಜಟಿಲವಾದ ಸಮಸ್ಯೆಯನ್ನು ಸ್ವಲ್ಪ ಹೆಚ್ಚುಕಡಮೆ ನಡಿ

ಪಡಿಸಿ ನಮ್ಮ ಮುಂದೆ ವರದಿಯಾಗಿಟ್ಟಿರುವುದು ಬಹಳ ಸಂತೋಷದ ವಿಷಯ. ಒಂದು ವೇಳೆ ನನಗೇನಾದರೂ ಈ ಜವಾಬ್ದಾರಿಯನ್ನು ಕೊಟ್ಟಿದ್ದರೆ, ಒಂದೂ ವರೆವರ್ಷ ತೆಗೆದುಕೊಳ್ಳುತ್ತಿದ್ದೆ. ಇದು ಸತ್ಯ. (*Laughter*) I am only putting it to the House to express my incapacity. It is a thing about which I must placed my incapacity because the problem is of such a difficult nature, with many intricacies and far-reaching consequences.

Sri K. PUTTASWAMY (Mysore).—Sir, I do not concede that Sri Channabasappa is incapable of anything. On the other hand, it was his ability that would have made him take 1½ years. (*Laughter*).

Sri H. M. CHANNABASAPPA.—I thank my friend for the compliments. I do not want to read into what my friend has said because he comes from my district and has so much of affection towards me. If the compliment had come from the left hand side, that would have been a different thing. (*Laughter*). I am giving only a picture against the background of which we have to consider the Jatti Committee Report.

ನಾನು ಮೊದಲೇ ಹೇಳಿದ ಹಾಗೆ ಪ್ರಜಾಪ್ರಭುತ್ವ ಎನ್ನುವುದು ಬಹಳ ಸ್ಲೋ ಪ್ರೋಸೆಸ್. ಈಗ ಪ್ರಥಮತಃ ಹೊಸ ರಾಜ್ಯಕ್ಕೆ ಸಂಬಂಧಪಟ್ಟ ಕೆಲವು ಅಂಕಿ ಅಂತಗಳನ್ನು ತಮ್ಮ ಮುಂದಿಟ್ಟರೆ, ಈ ವರದಿಯನ್ನು ಪರಿಶೀಲನೆ ಮಾಡುವಾಗ ಸಹಾಯವಾಗುತ್ತದೆ. ಒಂದು ವೇಳೆ ಅವುಗಳಲ್ಲಿ ತಪ್ಪು ಇದೆ ಎಂದು ತೋರಿಸಿದರೆ ನಾನು ಒಪ್ಪಿಕೊಳ್ಳಲು ಸಿದ್ಧವಾಗಿದ್ದೇನೆ. These figures are based on the "Report of the Mysore Tenancy Agricultural Land Laws Committee" and supplemented by other Reports.

ನಮಗೆ ಒಟ್ಟು 2,67,80,000 ಎಕರೆ ಹಿಡುವಳಿ ಜಮೀನು ಇದೆ. ಇದರಲ್ಲಿ 61,40,000 ಎಕರೆ ಗೇಣಿಗೆ ಕೊಟ್ಟಿದೆ. ಹಳೆಯ ಮೈಸೂರಿನಲ್ಲಿ (ಬಳ್ಳಾರಿ ಡಿಸ್ಟ್ರಿಕ್ಟ್ ಸೇರಿ) ಇದ್ದುದು 80,40,000 ಎಕರೆ ಜಮೀನು; ಇದರ ಪೈಕಿ 6,80,000 ಎಕರೆ ಮಾತ್ರ ಗೇಣಿಯಲ್ಲಿ ಇದೆ. (ಅಂದರೆ ಸುಮಾರು ಶೇಕಡ ಎಂಟೂವರೆ ಜಮೀನು ಲೀಸ್ ಆಗಿದೆ) 6,80,000 ಎಕರೆ ಪೈಕಿ 70 ಲಕ್ಷ ಚಿಲ್ಲರೆ ಎಕರೆ, ಸ್ವಂತ ಸಾಗುವಳಿಯಲ್ಲಿದೆ. ಹೊಸದಾಗಿ ಮೈಸೂರಿಗೆ ಸೇರಿದ ಇತರ ಪ್ರದೇಶಗಳಲ್ಲಿ ಹಿಡುವಳಿಯಲ್ಲಿರತಕ್ಕ ಜಮೀನು 187,40,000 ಎಕರೆ; ಇದರ ಪೈಕಿ ವ್ಯವಸಾಯಕ್ಕೆ, ಗೇಣಿಕೊಟ್ಟಿರತಕ್ಕದ್ದು 100ಕ್ಕೆ 30ರಷ್ಟು. ಹಳೆಯ ಮೈಸೂರಿನಲ್ಲಿ ಗೇಣಿಗೆ ಕೊಟ್ಟಿರತಕ್ಕ ಜಮೀನು ಶೇಕಡ ಎಂಟೂವರೆ ಅಂದಮೇಲೆ, ನಮಗೆ ಬಂದಿರತಕ್ಕಂಥ ಕಷ್ಟ ಎಂದರೆ ಈ ಗೇಣಿ ಸಮಸ್ಯೆ. ಈ ಗೇಣಿ ಸಮಸ್ಯೆ ಹಳೆಯ ಮೈಸೂರು ಬಿಟ್ಟು ಬೇರೆ ಪ್ರದೇಶಗಳಲ್ಲಿ ಬಹಳ ಹೆಚ್ಚಾಗಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಇದರ ಜೊತೆಗೆ ಒಬ್ಬೊಬ್ಬ ಜಮೀನುದಾರನಲ್ಲಿ ಎಷ್ಟೆಷ್ಟು ಜಮೀನು ಇದೆ ಎಂದರೆ?

ಹಳೆಯ ಮೈಸೂರಿನ ಕೆಲವು ಜಿಲ್ಲೆಗಳಲ್ಲಿ ಎಂದರೆ—ಬೆಂಗಳೂರು, ಕೋಲಾರ ಮತ್ತು ಮೈಸೂರು ಈ ಜಿಲ್ಲೆಗಳಲ್ಲಿ ಗೇಣೀದಾರನ ವಶದಲ್ಲಿರತಕ್ಕ ಜಮೀನಿಗಿಂತಲೂ ಹೆಚ್ಚು ಜಮೀನು ರೈತನಾದವನಲ್ಲಿ ಮತ್ತು ಸ್ವಂತ ಸಾಗುವಳಿದಾರರಲ್ಲಿ ಇರುವುದಿಲ್ಲ; ಬೆಂಗಳೂರು ಜಿಲ್ಲೆಯಲ್ಲಿ ಪ್ರತಿಯೊಬ್ಬ ಸ್ವಂತ ಸಾಗುವಳಿದಾರನ ವಶದಲ್ಲಿರತಕ್ಕ ಜಮೀನು ಸರಾಸರಿ ಲೆಕ್ಕದ ಪ್ರಕಾರ ಮೂರೂವರೆ ಎಕರೆಗಳು. ಇದೇ ಜಿಲ್ಲೆಯಲ್ಲಿ ಗೇಣೀದಾರನಲ್ಲಿರತಕ್ಕ ಜಮೀನು ಎಂಟು ಎಕರೆ. ಕೋಲಾರ ಜಿಲ್ಲೆಯಲ್ಲಿ ಸರಾಸರಿ ಒಬ್ಬ ಸ್ವಂತ ವ್ಯವಸಾಯ ಮಾಡತಕ್ಕವನಲ್ಲಿರತಕ್ಕ ಜಮೀನು 4·1 ಎಕರೆ. ಗೇಣೀದಾರನಲ್ಲಿರತಕ್ಕದ್ದು ಐದೂವರೆ ಎಕರೆ. ತುಮಕೂರು ಜಿಲ್ಲೆಯಲ್ಲಿ ಸ್ವಂತಸಾಗುವಳಿ ಮಾಡತಕ್ಕವನಲ್ಲಿರುವುದು ಸರಾಸರಿ 6 ಎಕರೆ. ಗೇಣೀದಾರನಲ್ಲಿರುವುದು 11 ಎಕರೆ. ಹೀಗೆ ಸ್ವಂತ ವ್ಯವಸಾಯಮಾಡತಕ್ಕ ಜನರಿಗಿಂತಲೂ ಹೆಚ್ಚು ಭೂಮಿ ಗೇಣೀದಾರರ ವಶದಲ್ಲಿದೆ. ಇನ್ನು ಹೊಸದಾಗಿ ಮೈಸೂರಿಗೆ ಸೇರಿರತಕ್ಕ ಭಾಗದಲ್ಲಿ ಎಂದರೆ ಗುಲ್ಬರ್ಗ, ರಾಯಚೂರು, ಬಿಜಾಪುರ, ಧಾರವಾಡ ಇತ್ಯಾದಿ ಜಿಲ್ಲೆಗಳಲ್ಲಿ ಸ್ವಂತ ಸಾಗುವಳಿದಾರರಲ್ಲಿರತಕ್ಕ ಸರಾಸರಿ ಜಮೀನು ಒಬ್ಬೊಬ್ಬರಲ್ಲಿ 18 ಎಕರೆಗಳು. ಅದೇ ಕ್ಷೇತ್ರಗಳಲ್ಲಿ ಗೇಣೀದಾರರಲ್ಲಿರತಕ್ಕದ್ದು ಸರಾಸರಿ 19½ಎಕರೆ; ಬಿಜಾಪುರ ಜಿಲ್ಲೆಯಲ್ಲಿ ಸ್ವಂತಸಾಗುವಳಿದಾರರಲ್ಲಿ ಸರಾಸರಿ ಇರತಕ್ಕ ಜಮೀನು ವಿಸ್ತೀರ್ಣ 16½ಎಕರೆ. ಅದೇ ಜಿಲ್ಲೆಯಲ್ಲಿ ಗೇಣೀದಾರನಲ್ಲಿರತಕ್ಕ ಜಮೀನು 75 ಎಕರೆ ಸರಾಸರಿ. ರಾಯಚೂರು ಜಿಲ್ಲೆಯಲ್ಲಿ ಸರಾಸರಿ 21½ ಎಕರೆ ಸ್ವಂತ ಸಾಗುವಳಿ ಮಾಡತಕ್ಕವರ ಕೈಯಲ್ಲಿ; ಗೇಣೀದಾರರಲ್ಲಿರುವುದು ಸರಾಸರಿ 74 ಎಕರೆ. ಇನ್ನು ಗುಲ್ಬರ್ಗ ಜಿಲ್ಲೆಯನ್ನು ತೆಗೆದುಕೊಳ್ಳೋಣ. 21½ ಎಕರೆ ಸ್ವಂತ ಸಾಗುವಳಿದಾರನಲ್ಲಿದ್ದರೆ ಅದೇ ಗೇಣೀದಾರನಲ್ಲಿ ಸರಾಸರಿ ಇರುವುದು 57½ ಎಕರೆ, ಬೀದರಿನಲ್ಲಿ ಈ ಅಂತರ ಸ್ವಲ್ಪ ಕಡಮೆ ಇದೆ. 19½ ಎಕರೆ ಸ್ವಂತ ಸಾಗುವಳಿ ಮಾಡತಕ್ಕವನ ಕೈಯಲ್ಲಿ. ಗೇಣೀದಾರರಲ್ಲಿ ಸರಾಸರಿ 35 ಎಕರೆ ಇದೆ. ಇನ್ನು ಬಾಕಿ ಜಿಲ್ಲೆಗಳಲ್ಲಿ ಸಮಾನಾಗಿದೆ ಇಲ್ಲವೇ ಸ್ವಲ್ಪ ಹೆಚ್ಚುಕಡಮೆ ಇದ್ದರೂ ಇರಬಹುದು.

Sri G. ANNA RAO.—What are you driving at?

Sri H. M. CHANNABASAPPA.—We must first know the position. Then the Hou'ble Member can suggest any remedy he wants.

ಶ್ರೀ ಬಿ. ಬಸವಲಿಂಗಪ್ಪ (ಬೆಂಗಳೂರು-ದಕ್ಷಿಣ).—ಆಬ್‌ಸೆಂಟೀ ಲ್ಯಾಂಡ್‌ಲಾರ್ಡ್‌ಸ್ ಎಷ್ಟು ಜನರಿದ್ದಾರೆಂಬುದನ್ನು ತಿಳಿಸುವಿರಾ?

ಶ್ರೀ ಎಚ್. ಎಂ ಚನ್ನಬಸಪ್ಪ,—ತಮ್ಮ ನಮಿತಿಯವರು ಏನೊಂದು ವರದಿಯನ್ನು ಕೊಟ್ಟಿದ್ದಾರೋ ಅದರಲ್ಲಿ ಹೇಳಿರತಕ್ಕದ್ದನ್ನೇ ಕೂಡಿ, ಕಳೆದರೆ ನಾನು ಹೇಳುತ್ತಿರುವ ಅಂಕ ಅಂತಗಳು ಸಿಕ್ಕುತ್ತವೆ. ಇಲ್ಲಿಯವರೆಗೂ ನಾನು ಹೇಳಿರತಕ್ಕ ಅಂತಗಳೇನಿವೆಯೋ ಅವುಗಳನ್ನು ನಾನೇನೂ ಸ್ವತಃ ನಿರ್ಮಾಣ ಮಾಡಿದುವುಗಳಲ್ಲ. ಮತ್ತೆ ಏರಿಯಾ ಲಸ್ಟ್ ತೆಗೆದುಕೊಂಡರೆ ಹಳೆಯ ಮೈಸೂರು ಪ್ರಾಂತದಲ್ಲಿ ಗೇಣೀದಾರರಲ್ಲಿರತಕ್ಕ ಜಮೀನು ಶೇಕಡ 2·2, ಹೊಸಪ್ರಾಂತದಲ್ಲಿರತಕ್ಕ ಜಮೀನು ಶೇಕಡ 20.3, ಎಂದ ಮೇಲೆ ಇದರಿಂದ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಏನು ವ್ಯಕ್ತವಾಗುತ್ತದೆ? ಈ ವಿಚಾರದಲ್ಲಿ ನಾವು ಹೆಚ್ಚು ಪ್ರತಿಪಾದನೆ ಮಾಡುವುದು ಅನಗತ್ಯ. ಹಳೆಯ ಮೈಸೂರಿನಲ್ಲಿ ಗೇಣೀದಾರರ ವಶದಲ್ಲಿರುವ ಭೂಮಿ ಬಹಳ ಕಡಮೆ. ಹೊಸ ಪ್ರಾಂತ್ಯದಲ್ಲಿ ಅದರ ಪ್ರಮಾಣ ಜಾಸ್ತಿ ಇದೆ. ಅದೇ ರೀತಿ ಆ ಹೊಸ ಪ್ರಾಂತ್ಯದಿಂದ ನಮಗೆ ಸೇರಿರತಕ್ಕಂಥ ಭೂವಿಸ್ತೀರ್ಣವೂ ಕೂಡ ಹೆಚ್ಚಾಗಿದೆ. ಹೀಗೆ ಇದು ಆ ವಿಸ್ತೀರ್ಣಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಇನ್ನು ಗೇಣೀದಾರರ ವಿಚಾರ, ಸ್ವಂತ ಸಾಗುವಳಿಮಾಡತಕ್ಕ ಜನರು ಕೂಲೀಗಾರರ ವಿಚಾರ ತೆಗೆದುಕೊಳ್ಳೋಣ, ಹಳೆಯ ಮೈಸೂರಿನಲ್ಲಿರತಕ್ಕ ಜೆನೆಂಟ್ಸ್‌ಗಳ ಸಂಖ್ಯೆ ಶೇಕಡ 6.9 ಇದೆ. ಹೊಸ ಪ್ರಾಂತ್ಯಗಳಲ್ಲಿ ಈ ಶೇಕಡಾವಾರು ಸಂಖ್ಯೆ 19·1. ಆದರೆ ಇತ್ತೀಚೆಗೆ ಈ ರಾಜ್ಯಗಳು ಹೊಸದಾಗಿ ನಿರ್ಮಾಣವಾದ ಮೇಲೆ ಈ ಸಂಖ್ಯೆ ಶೇಕಡ 13·1ಕ್ಕೆ ಇಳಿಯಿತು. ಇವು ಒಟ್ಟು ಸಂಸ್ಥಾನಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳಾಗಿವೆ. ನಮ್ಮ ಹಳೆಯ ಮೈಸೂರಿನಲ್ಲಿ ಈ ಗೇಣೀದಾರರ ಸಂಖ್ಯೆ ಏಕ ಶೇಕಡ 6·9ಕ್ಕೆ ಹೋಗಿಕ್ತೆಂದರೆ ಅದು ನಮ್ಮ ಮಾನ್ಯ ಸದಸ್ಯರಾದ ಶ್ರೀ ಕಡಿದಾಳ್ ಮಂಜಪ್ಪನವರ ಕ್ಷೇತ್ರದ ಫಲವಾಗಿ ಆ ರೀತಿ ಆಯಿತು. ಶಿವಮೊಗ್ಗ ಜಿಲ್ಲೆಯಲ್ಲೆ . . . .

Sri Kadidal MANJAPPA (Sringeri).—The statistics that he is quoting are not correct. That is to be found in the information furnished in the month of October 1956 to the then members of the Legislature.

Sri H. M. CHANNABASAPPA.—If the Hon'ble Member is prepared to prove that it is incorrect then I am prepared to accept it. But I may tell him that these are up-to-date and latest figures supplied by the Committee and Government.

ಶಿವಮೊಗ್ಗ ಜಿಲ್ಲೆಯಲ್ಲಿ ಸ್ವಂತ ವ್ಯವಸಾಯದ ಜನರು ಇರುವುದು ಬಹಳ ಕಡಮೆ. ಅಲ್ಲಿ ಗೇಣೀದಾರರ ಸಂಖ್ಯೆ ಶೇಕಡ 23·3 ಇದೆ. ಹಾಸನ ಜಿಲ್ಲೆಯಲ್ಲಿ ಶೇಕಡ 3·3.

Sri Kadidal MANJAPPA.—It is incorrect.

Sri H. M. CHANNABASAPPA.—If the statistics are incorrect, then I stand corrected.

Sri B. RACHIAH (Chamarajanagar).—The figures given in the report are correct, but the calculation that the Hon'ble Member has made is not correct.

Sri A. BHEEMAPPA NAIK.—The Hon'ble Member must prove that the calculation that he has made is incorrect.

Sri H. M. CHANNABASAPPA.—I do not go to the extent of committing such a fraud on this House. If per chance any mistake has been committed, if the Hon'ble Member points out that to me, I shall be very grateful to him and I shall accept it very gracefully.

ಶಿವಮೊಗ್ಗೆ ಜಿಲ್ಲೆಯಲ್ಲಿ ಗೇಣೀದಾರರ ಸಂಖ್ಯೆ ಶೇಕಡ 23.3. ಇದೆ, ಹಾಸನ ಜಿಲ್ಲೆಯಲ್ಲಿ ಶೇಕಡ 3·3. ಇದೆ. ತುಮಕೂರು ಜಿಲ್ಲೆಯಲ್ಲಿ ಈ ಗೇಣೀದಾರರ ಶೇಕಡ ಸಂಖ್ಯೆ 4; ಕೋಲಾರದಲ್ಲಿ ಶೇಕಡ 4·7 ಇದೆ. ಚಿಕ್ಕಮಗಳೂರಿನಲ್ಲಿ ಶೇಕಡ 3 ಇದೆ. ಚಿತ್ರದುರ್ಗದಲ್ಲಿ ಶೇಕಡ 5 ಇದೆ.

If the tenancy percentage has gone up it is more on account of Sri Kadidal Manjappa's District of Shimoga.

Sri Kadidal MANJAPPA.—Sir, I take objection to it. I am elected both by the people of Shimoga District and the people of Chickmagalur District.

ಶ್ರೀ ಎಚ್. ಎಂ. ಚೆನ್ನಬಸಪ್ಪ.—

ಇನ್ನು ಹಳೆಯ ಮೈಸೂರಿನಲ್ಲಿ		6·9
ಬೇರೆ ಪ್ರಾಂತಗಳಲ್ಲಿ	...	55·6
ನಾರ್ತ್ ಕೆನರಾ	...	55·4
ಬೆಳಗಾಂ	...	18·75
ಧಾರವಾಡ		13·00
ಕೊಡಗು	...	18·00 and

so on and so forth. The problem both when considered in regard to population of tenants and the area held by them is really of an acute nature.

ಜನಗಣತಿಯ ಮೇಲೆ ಲೆಕ್ಕ ಹಾಕಿದರೆ ಎಷ್ಟು ಆರಂಭಕ್ಕಾಗಿ ಅಥವಾ ಗೇಣಿಗೆ ಕೊಟ್ಟಿದ್ದಾರೋ ಅದರ ಪ್ರಕಾರವಾಗಿ, ಈ ಗೇಣಿದಾರರ ಸಮಸ್ಯೆ ಹೈದರಾಬಾದಿನಲ್ಲಿ, ಬೊಂಬಾಯಿಯಲ್ಲಿ, ಸ್ವಲ್ಪ ಮಟ್ಟಿಗೆ ತೀವ್ರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾದ ಪ್ರಮಾಣದಲ್ಲಿದೆ. ಅದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಇದಕ್ಕೆ ತಕ್ಕ ಗಮನವನ್ನು ಕೊಡಬೇಕಾದುದು ಯುಕ್ತವಾಗುದು.

ಇನ್ನು ಭೂಮಿ ಹೇಗೆ ವಿಭಾಗವಾಗಿದೆ, ಯಾವ ಯಾವ ಪ್ರಮಾಣದಲ್ಲಿ ಹೋಲ್ಡಿಂಗ್ಸ್ ಇವೆ, ಎಷ್ಟೆಷ್ಟು ಮಟ್ಟಿನಲ್ಲಿ ಉಲ್ಬಣಾವಸ್ಥೆಯಲ್ಲಿವೆ ಎನ್ನತಕ್ಕದ್ದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ. ನಾನು ಈಗ ಕೊಡತಕ್ಕ ಕೆಲವು ಅಂಕಿ ಅಂಶಗಳಿಂದ ಇದು ಹೇಗಿದೆ ಎನ್ನುವುದು ತಿಳಿಯುತ್ತದೆ. ಅರವತ್ತು ಎಕರೆಗಿಂತ ಮೀರಿ ಎಷ್ಟತ್ತು ಎಕರೆಗೆ ಕಡಮೆ . . . .

ಶ್ರೀ ಡಿ. ದೇವರಾಜ ಅರಸ್.—ಈಗ ತಾವು ಅಂಕಿ ಅಂಶಗಳನ್ನು ಹೇಳುತ್ತ ಇನ್‌ಫರೆನ್ಸ್ ಡ್ರಾ ಮಾಡತಕ್ಕದ್ದು ನಮ್ಮ ಹಳೆಯ ಮೈಸೂರಿನ ಗೇಣಿಗೆ ಎಂದರೆ ಜೆನೆಂಟ್ಸಿಗೆ ಅನ್ಯಾಯವಾಗುತ್ತದೆಯೇ ಹೇಗೆ ಎನ್ನುವುದನ್ನು ತಿಳಿಸಿದರೆ ಸರಿಯಾಗಿ ಕಾಣುತ್ತದೆ.

Sri H. M. CHANNABASAPPA.—Why should not our friend have the patience at least to know the facts and figures and then he may draw his own inference. I will of course tell him my own view. I am not merely going to

stop with giving figures and facts. I will satisfy and clear the doubts.

ಶ್ರೀ ಡಿ. ದೇವರಾಜ ಅರಸ್ —ಈಗ ಕೊಟ್ಟಿರತಕ್ಕ ಅಂಕಿಗಳಿಂದ ಇವ್ಯಾರೆನ್ಸ್ ಡ್ರಾ ಮಾಡಿದರೆ ಹಳೆಯ ಮೈಸೂರಿನಲ್ಲಿ ಒಟ್ಟುಗೆ ಣಿವಾರಾ ಪ್ರಪೋರ್ಷನ್ನನ್ನು ಮತ್ತು ಒಟ್ಟು ಕಲ್ಟಿವೇಟರುಗಳನ್ನು ತೆಗೆದುಕೊಂಡರೆ 6·00 ಚಿಲ್ಲರೆ ಟೆನೆಂಟ್ಸ್ ಬರುತ್ತಾರೆ.

The inference may be like this.

ಹೊರಗಡೆಯಿಂದ ಬಂದಿರುವ ಟೆನೆಂಟುಗಳನ್ನು ಮತ್ತು, ಕಲ್ಟಿವೇಟರುಗಳನ್ನು ಮತ್ತು ಟೆನೆಂಟಿಗೆ ಕಲ್ಟಿವೇಷನ್ನಿಗೆ ಇರತಕ್ಕ ಲ್ಯಾಂಡಿನ ಏರಿಯೂವನ್ನು ತೆಗೆದುಕೊಂಡರೆ, the area cultivated by these six and odd per cent tenants is only two and odd per cent of the cultivated area. It will be to the tune of 19·1 and odd per cent. That may come to 20 and odd per cent of land. That means the tenancy problem in old Mysore will be worse because the ratio of land to each tenant is very much smaller than the ratio of land outside the Mysore State.

ನನ್ನ ಸ್ನೇಹಿತರು ಹೇಳತಕ್ಕಂತಹುದು. That will be the inference.

On the other hand by his own figures it is true as far as tenants are concerned in the old Mysore State.

Sri H. M. CHANNABASAPPA.—My Hon'ble friend is premature. He has got up at a premature stage. When I am dealing with that point, when I am going to draw an inference, is it open to the Hon'ble Member to say if the inference I draw is correct or not? If it is incorrect, I am prepared to stand corrected. I am only making a perface . . .

Sri M. C. NARASIMHAN (Kolar Gold Fields).—The Hon'ble Member's perface is like Bernard Shaw's preface!

Sri H. M. CHANNABASAPPA.—We have got to remedy the situation. This is not a party question. This is a social question. It is an economic question. It is a question of the 'haves' and 'have-nots' and we have to solve it. It is not good to stand on formalities. In case, old Mysore deserves to be dealt with severely, I am with you that it should be dealt with more severely than Gulbarga or Raichur. I am second to none in saying that in order to cure this evil, if old Mysore should be dealt with harshly, it should be done.

ಈಗ 60 ರಿಂದ 75 ಎಕರೆಯೊಳಗೆ ಹಳೆಯ ಮೈಸೂರಲ್ಲಿ 3,530 ಜನ ಹೋಲ್ಡರ್ಸ್ ಇದ್ದಾರೆ. ಬೇರೆ ಪ್ರಾಂತಗಳಲ್ಲಿ 13,102 ಜನ ಇದ್ದಾರೆ. ಈ ಅಂಕಿಗಳನ್ನ ನಾನು ವರ್ಕೌಟು ಮಾಡಿಕೊಂಡು ಬಂದು ಇಟ್ಟಿರಾ ಕೊಂಡಿದ್ದೇನೆ. ಆದರಿಂದ ಹೇಳುತ್ತಿದ್ದೇನೆ.

75 ಎಕರೆಯಿಂದ 100 ಎಕರೆಯೊಳಗೆ ಹಳೆಯ ಮೈಸೂರಿನಲ್ಲಿ 2,733 ಜನ ಇದ್ದಾರೆ. ಬೇರೆ ಪ್ರಾಂತಗಳಲ್ಲಿ 10,248 ಜನ ಇದ್ದಾರೆ.

100 ಎಕರೆಗಳಿಂದ 150 ಎಕರೆಗಳವರೆಗೆ ಹಳೇ ಮೈಸೂರಿನಲ್ಲಿ 1949 ಜನರಿದ್ದಾರೆ, ಬೇರೆ ಪ್ರಾಂತಗಳಲ್ಲಿ 6,409 ಜನಗಳಿದ್ದಾರೆ.

150 ಎಕರೆಗಳಿಂದ 200 ಎಕರೆಗಳವರೆಗೆ ಹಳೇ ಮೈಸೂರಿನಲ್ಲಿ 653 ಜನರು ಮತ್ತು ಇತರ ಪ್ರಾಂತಗಳಲ್ಲಿ 1858 ಜನರಿದ್ದಾರೆ.

200 ಎಕರೆಗಳಿಂದ 300 ಎಕರೆಗಳವರೆಗೆ ಹಳೆಯ ಮೈಸೂರಿನಲ್ಲಿ 438 ಜನರಿದ್ದಾರೆ. ಬಾಕಿ ಪ್ರಾಂತಗಳಲ್ಲಿ 1,235 ಜನ ಳಿದ್ದಾರೆ.

300 ಎಕರೆಗಳಿಂದ 500 ಎಕರೆಗಳವರೆಗೆ ಹಳೆಯ ಮೈಸೂರಿನಲ್ಲಿ 195 ಜನರಿದ್ದಾರೆ. ಬೇರೆ ಕಡೆಗಳಲ್ಲಿ 643 ಜನರಿದ್ದಾರೆ.

500 ಎಕರೆಗಳಿಂದ 1000 ಎಕರೆಗಳವರೆಗೆ ಹಳೆಯ ಮೈಸೂರಲ್ಲಿ 95 ಜನರಿದ್ದಾರೆ. ಬೇರೆ ಕಡೆಗಳಲ್ಲಿ 289 ಜನರಿದ್ದಾರೆ.

1000 ಎಕರೆಗಳಿಗೆ ಮೇಲ್ಪಟ್ಟು ಇದಾವಾಗ ಹಳೆಯ ಮೈಸೂರಿನಲ್ಲಿ 22 ಜನ ಹೋಲ್ಡರುಗಳು ಸಿಕ್ಕುತ್ತಾರೆ. ಬಾಕಿ ಪ್ರಾಂತಗಳಲ್ಲಿ 131 ಜನ ಸಿಕ್ಕುತ್ತಾರೆ.

ಜಮೀನಿನಲ್ಲಿ ವ್ಯವಸಾಯ ಮಾಡತಕ್ಕವರ ಪ್ರಮಾಣ 2 ರಿಂದ 4 ಷ್ಟು ಇದೆ. ಬೇರೆ ಬೇರೆ ಪ್ರಮಾಣದಲ್ಲಿ 1,000 ಎಕರೆಗಳಿಗೆ ಮೇಲ್ಪಟ್ಟು ನೋಡಿದರೆ 132 ಜನರು ಸಿಕ್ಕುತ್ತಾರೆ.

ಶ್ರೀ ಎ. ವೆಂಕಟಪ್ಪ (ವಿದ್ಯಾಶಾಖೆಯ ಮಂತ್ರಿಗಳು).—ಜೋಡಿ ಇನಾಂ ಇದರಲ್ಲಿ ಸೇರಿದೆಯೋ ಅಥವಾ ಬೇರೆ ಸೇರಿವೆಯೋ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಜೋಡಿ ಮತ್ತು ಇನಾಂ ಪ್ರಶ್ನೆ ಇಲ್ಲಿಲ್ಲ.

ಶ್ರೀ ವಿ. ಪೆ ಕಟಪ್ಪ.—ಈಗ ತಾವು ಹೇಳುತ್ತಿರುವ ಅಂಕಿಗಳಲ್ಲಿ ಜೋಡಿ ಮತ್ತು ಇನಾಂಗಳ ಅಂಕಿಗಳೂ ಸೇರಿವೆಯೆ ನು?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಆ ಪ್ರಶ್ನೆ ಇಲ್ಲಿಲ್ಲ. ಈಗಿನವ ಜೋಡಿ ಗ್ರಾಮಗಳಲ್ಲಿ ಸರ್ವೆ ಸೆಟಲ್‌ಮೆಂಟು ಆಗದೆ ಇರುವುದರಿಂದ ಸರ್ಕಾರಿ ಜಮೀನುಗಳಲ್ಲಿ ಬರತಕದು ಮಾತ್ರ ಇಲ್ಲಿ ಕೊಟ್ಟಿದೆ. ಜೋಡಿ ಗ್ರಾಮಗಳ ಬಗ್ಗೆ ಕಾನೂನು ಆಗಲೇ ಮಾತಾಡಿದೆ.

ಶ್ರೀ ಎ. ಆರ್. ಬದರೀನಾರಾಯಣ್ (ತೀರ್ಥಹಳ್ಳಿ).—ಈ ಕಲ್ಟಿವೇಷನ್ನಿನಲ್ಲಿ ತರಿ, ಬಾಗಾಯ್ತು ಇವೂ ಬರುವ್ರವೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೂ ಕೊಡ ಬಹುದಾಗಿತ್ತು. ಆದರೆ ನಾನು 6, 7, 8 ತಿಂಗಳಿಂದ ಸರ್ಕಾರಕ್ಕೆ ಈ ವಿವರಗಳನ್ನು ಕೊಡಬೇಕೆಂದು ಕೇಳಿದ್ದರೂ ಉತ್ತರ ಕೊಟ್ಟಿಲ್ಲ. ಆ ಅಂಕಿಗಳು ಈಗ ನನ್ನಲ್ಲಿಲ್ಲ. ಕಷ್ಟವಿದ್ದರೆ ಅದನ್ನೂ ಕೊಡಬಹುದಾಗಿತ್ತು. ಆದರೆ ನನ್ನ ಕೈಗೆ ಈ ಜತ್ತಿ ಸಮಿತಿಯ ವರದಿ 10ನೆಯ ತಾರೀಖು ತಲುಪಿತು. ಅದರಂತೆಯೆ ನಾನು ವರ್ಕೌಟು ಮಾಡಿಕೊಂಡು ಇಲ್ಲಿ ತಪ್ಪಿಗೆ ಹೇಳುತ್ತಿದ್ದೇನೆ. ವರದಿಯಲ್ಲಿ ಕೊಟ್ಟಿರುವ ಸಣ್ಣ ಹಿಡುವಳಿದಾರರ ಅಂಕಿಗಳಲ್ಲಿ ತಪ್ಪು ಇವೆಯೆಂದು ಅನುಮಾನವಿದೆ. ಕಮಿಟಿ

(ಶ್ರೀ ಎಚ್. ಎಂ ಚನ್ನಬಸಪ್ಪ)

ಯವರು ವಿವರಣೆ ಕೊಟ್ಟರೆ ಉತ್ತಮವಾಗುತ್ತದೆ. ಮೈಸೂರು ರಾಜ್ಯದಲ್ಲಿ ಐದು ಎಕರೆಯ ವರೆಗೆ ಇರುವ ಹಿಡುವಳಿದಾರರ ಒಟ್ಟು ಸಂಖ್ಯೆ 11,64,334 ಎಂದು ಇದೆ. ಕೊಡಗಿನಲ್ಲಿ 4,21,121 ಹಿಡುವಳಿದಾರರು ಇದ್ದಾರೆಂದು ಹೇಳಲಾಗಿದೆ. ಆದರೆ ಕೊಡಗಿನ ಪ್ರಜಾನಸಂಖ್ಯೆ ಎರಡು ಲಕ್ಷ ಮಾತ್ರ ಇದೆ. ಆದುದರಿಂದ ಈ ಅಂಕಿ ಅಂಶಗಳ ಬಗ್ಗೆ ಅನುಮಾನ ಬರುತ್ತದೆ. Government may kindly explain later on. If it is a printing mistake, that is alright. We cannot help it. ಹಳೆಯ ಮೈಸೂರಿನಲ್ಲಿ 5 ಎಕರೆಗೆ ಕಡಮೆ ಇರುವ ಹಿಡುವಳಿದಾರರ ಸಂಖ್ಯೆ 5,50,000 ಇದೆ. ಹೊರಗಿನಿಂದ 13 ಲಕ್ಷ ಎಕರೆ ಭೂಮಿ ಈ ಹೊಸ ರಾಜ್ಯದಲ್ಲಿ ಸೇರ್ಪಡೆಯಾಗಿದೆ.

Sri M. C. NARASIMHAN.—Between 1 and 5 acres—Rs. 5,56,000. Not exceeding 1 acre—Rs. 2,41,000. Total Rs. 7 lakhs and odd.

Sri H. M. CHANNABASAPPA.—From the date on which information was furnished to me to the day on which information was furnished to the Committee, so many changes have taken place. ಹೊಸ ಮೈಸೂರ ರಾಜ್ಯದಲ್ಲಿ ಬೇರೆ ಪ್ರಾಂತಗಳಿಂದ ಪ್ರದೇಶ ಬಂದಿರುವುದರಿಂದ ಹಿಡುವಳಿಯ ಸಂಖ್ಯೆಯು ಹೆಚ್ಚಾಗಿರಬಹುದು. ಜಮಾನು ಸಹ ಹೆಚ್ಚಾಗಿದೆ.

Mr. DEPUTY SPEAKER.—How much time will the Hon'ble Member require ?

Sri H. M. CHANNABASAPPA.—I require about one or two hours. I have not yet come to the Jatti Committee Report itself. I have no objection to resume my speech when we meet next time because it istime for us to rise. ವರದಿಯಲ್ಲಿ ಕೆಲವು ಅಂಕಿ ಅಂಶಗಳನ್ನು ಇಟ್ಟಿದ್ದಾರೆ. ಅವಶ್ಯಕವಿರುವ ಅಂಕಿ ಅಂಶಗಳನ್ನು ನಾನು ಒದಗಿಸುತ್ತೇನೆ. ಸರ್ಕಾರದವರು ಜತ್ತಿ ಕಮಿಟಿಗೆ ಇತ್ತಿರುವ Terms of Reference ಈ ರೀತಿಯಾಗಿವೆ.

> "Security of tenure, right to resume land, right to purchase land by tenants, ceiling extent, fixing the extent of basic or economic or family holdings and specifying areas, prohibition of land ownership as a source of income by persons who are not cultivators, matters relating to assumption of management or acquisition of land by Government, acquisition of land from persons who own land in village but who are not agriculturists and restrain on alienation."

ಬೇರೆ ಬೇರೆ ಭಾಗಗಳಲ್ಲಿಯ ಭೂಸಮಸ್ಯೆಯ ಕಾನೂನುಗಳನ್ನು ಸಮನ್ವಯಗೊಳಿಸಬೇಕಾಗಿರುವುದರಿಂದ ಇಂಥ ಪರಿಸ್ಥಿಯಲ್ಲಿ ಜತ್ತಿ ಸಮಿತಿ ಶಿಫಾರಸ್ಸು ವಾಗಿಯೇ ವರದಿ ನಲ್ಲಿಸಿದೆ. ಇದಕ್ಕಾಗಿ ಸಮಿತಿಯು ಅಭಿನಂದನಾರ್ಹವಾದುದು. ಭೂಮಿಗೆ ಸಂಬಂಧಪಟ್ಟವರು ಅಷ್ಟೇ ಅಲ್ಲದೆ ಬೇರೆ ಜನರು ಕೂಡ ಕೊಡುತ್ತಾರೆ. ಈ ಸಮಸ್ಯೆ ಬಹಳ ಮಹತ್ವ ಪೂರ್ಣವಾದುದು. ಎಲ್ಲಾ ಸಲಹೆಗಳನ್ನು ತೆಗೆದುಕೊಂಡು ಪರಿಶೀಲನೆಮಾಡಲಾಗುವುದು; ಇನ್ನು ಮುಂದೆ ಬಹಳ ಮಹತ್ವದ ಪರಿಣಾಮ ಉಂಟಾಗುತ್ತದೆ.

Mr. DEPUTY SPEAKER.—The discussion of this report will be resumed in the next session. The House will now rise and meet again at 4-30 P.M.

The House adjourned at Thirty Minutes past Twelve of the Clock and reassembled at Thirty Minutes past Four of the Clock

---

[MR. DEPUTY SPEAKER in the Chair]

MYSORE ELECTRICITY (TAXATION ON CONSUMPTION) (AMENDMENT) BILL, 1957.

Motion to consider.

Sri H. K. VEERANNA GOWDH (Minister for Public Works).—Sir, I beg to move :

> "That the Mysore Electricity (Taxation on Consumption) (Amendment) Bill, 1957 be taken into consideration."

ಸ್ವಾಮಿ, ಸಭೆಯವರ ಅವಗಾಹನೆಗೆ ಈ ತಿದ್ದುಪಡಿಯನ್ನು ಒಪ್ಪಿಸುತ್ತಾ, ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇದು ಹಿಂದೆ ಒಂದು ಕಾನೂನಾಗಿ ಯಾರು ಯಾರು ವಿದ್ಯುಚ್ಛಕ್ತಿಯನ್ನು ಬಳಸುತ್ತಾರೋ ಆ ಬಳಕೆಯ ಮೇಲೆ ಯೂನಿಟ್ಟಿಗೆ ಇಷ್ಟು ಎಂದು ಟ್ಯಾಕ್ಸ್ ಕೊಡಬೇಕಾಗಿತ್ತು. ಮೈಸೂರು ಸರ್ಕಾರದವರು ಸಪ್ಲೈ ಮಾಡತಕ್ಕ ವಿದ್ಯುಚ್ಛಕ್ತಿಯನ್ನು ಉಪಯೋಗಿಸತಕ್ಕವರು ತಾವು ಉಪಯೋಗಿಸಿದ ಮೊತ್ತದಮೇಲೆ ಇಷ್ಟಿಷ್ಟು ಕೊಡಬೇಕು ಎಂದು ಆಕ್ಟ್ ಇತ್ತು. ಈಗ ಸೆಪ್ಟೆಂಬರ್ 30 ರಿಂದ ವಿದ್ಯುಚ್ಛಕ್ತಿಯ ಆಡಳಿತವನ್ನು ಒಂದು ಬೋರ್ಡ್ ವಹಿಸಿದೆ. ಕೇಂದ್ರ ಸರ್ಕಾರದ ಒಂದು ಆಕ್ಟ್‌ನ್ನು ಅನುಸರಿಸಿ ನಾವು ಇಲ್ಲಿ ಎರೆಕ್ಟ್ರಿಸಿಟಿ ಬೋರ್ಡ್ ರಚನೆಮಾಡಿ ಅವರಿಗೆ ಸಾಮಾನ್ಯವಾದ ಎಲ್ಲಾ ಆಡಳಿತವನ್ನು ವಹಿಸಿದ್ದೇವೆ. ಆದರೆ ಟ್ಯಾಕ್ಸ್ ಮಾತ್ರ ಸರ್ಕಾರಕ್ಕೆ ಸಲ್ಲಬೇಕು. ಟ್ಯಾಕ್ಸ್ ಸರ್ಕಾರಕ್ಕೆ ಸಲ್ಲಬೇಕಾದರೆ ಬೋರ್ಡಿನವರು ಟ್ಯಾಕ್ಸುಗಳನ್ನು ವಸೂಲು ಮಾಡಿ ಸರ್ಕಾರಕ್ಕೆ ಕೊಡ